# ಅನುಬಂಧ ಭಾಗ

# ನನ್ನ ನೆನಪಿಗೋಸ್ಕರ ಇದನ್ನು ಮಾಡಿರಿ

## (ಭಾನುವಾರ ಮುಂಜಾನೆಯ ಧ್ಯಾನದ ಆರಾಧನೆ)

**ಹಾಡು.**

**ಪ್ರಾರ್ಥನೆ.**

**ಟಿಪ್ಪಣಿಗಳು:**

ಅನೇಕ ವರುಷಗಳ ಹಿಂದೆ, "ನೀನು ಅಲ್ಲಿದ್ದೀಯಾ" ಎಂಬ ಜನಪ್ರೀಯ ದೂರದರ್ಶನ ಕಾರ್ಯಕ್ರಮವು ಇತ್ತು. ಪ್ರತಿವಾರ, ಕೆಲ ಐತಿಹಾಸಿಕ ಘಟನೆಗಳು ಪ್ರದರ್ಶಿಸಲ್ಪಡುತ್ತಿದ್ದವು ಮತ್ತು ಇದರ ಪರಿಣಾಮವಾಗಿ ವೀಕ್ಷಕನು ಆ ಘಟನೆಯನ್ನು ತನ್ನ ನೆನಪಿಗೆ ತಂದುಕೊಳ್ಳುತ್ತಿದ್ದನು ಮತ್ತು ಅದಕ್ಕೆ ತಕ್ಕದಾದ ಕ್ರಿಯೆಯನ್ನು ಮಾಡುತ್ತಿದ್ದನು. ಕರ್ತನ ಮೇಜಿನ ಸುತ್ತಲೂ ನಾವು ಕೂಡಿಬರುತ್ತಿದ್ದಂತೆಯೇ ಇದಕ್ಕೆ ಸಮಾನವಾದಂಥವುಗಳು ಪ್ರತಿಭಾನುವಾರ ಕಂಡುಬರುತ್ತವೆ. C. A. Brown ರವರು ಈ ವಿಚಾರವನ್ನು ಈ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ:

> ಬಹಳ ಹಿಂದೇನಲ್ಲ, ನಾನು ನಂಬಿಕೆಯ ರೆಕ್ಕೆಗಳಲ್ಲಿ ಶತಮಾನಗಳ ಮಧ್ಯವರ್ತಿಯಲ್ಲಿ ಹಾದುಹೋದೆನು ಮತ್ತು "ಪವಿತ್ರನಾಡಿಗೆ" ಭೇಟಿ ಇತ್ತೆನು. ವಾಗ್ದತ್ತ ನಾಡದ "ಹಾಲೂ ಜೇನೂ ಹರಿಯುವ" ನಾಡಿನ ಉದ್ದದ ನಡಿವಿನ ಅಂತರದ ಮಿತಿಯಲ್ಲಿದ್ದೆನು. ಡಾನ್ ಬಾರ್ಷೀಬಾದಿಂದ Dan to Beersheba, ಅಬ್ರಹಾಮ ಇಸಾಕ ಮತ್ತು ಯಾಕೋಬರು ಒಂದೊಮ್ಮೆ ಜೀವಿಸಿದ್ದ ನಾಡನ್ನು ನಾನು ಪರೀಕ್ಷಿಸಿದೆನು. ಕ್ರಿಸ್ತನು ಜನಿಸಿದಾಗ ಹೊಸದಾಗಿ ಹುಟ್ಟೀದ ಅರಸನಿಗೆ ಅಚ್ಚರಿಯಿಂದ ದೇವದೂತರು ಮಾತನಾಡಲಾರದ ಸಂತೋಷದಿಂದ ಹಾಡಿದರು ಎಂದೂ ನಾನು ಕೇಳಿದ್ದೆನು.
>
> ಯೇಸು ಒಳ್ಳೆಯದನ್ನು ಮಾಡುವಾಗ ಮತ್ತು ದೆವ್ವಪೀಡಿತರಾದ ಎಲ್ಲರನ್ನು ವಾಸಿ ಮಾಡವಾಗ ನಾನು ಯೇಸುವಿನೊಡನೆ ನಡೆದನು. ಆತನ ಅದ್ಭುತವಾದ ಜೀವವುಳ್ಳ ಮಾತುಗಳನ್ನು ಕೇಳಿದನು ಮತ್ತು ಮರಣದಿಂದ ಎಬ್ಬಿಸುವಾಗ ಕರುಣೆಯಿಂದ ಆತನನ್ನು ನೋಡಿದೆನು. ಗಲಿಲಾಯದ ದಂಡೆಯಲ್ಲಿ ಆನ ಹೆಜ್ಜೆಯಜಾಡಿನಲ್ಲಿ ಹೆಜ್ಜೆಹಾಕುತ್ತಾ ಸಮುದ್ರವನ್ನೂ ಗಾಳಿಯನ್ನೂ ಗದರಿಸಿದ್ದನ್ನೂ ನೋಡಿದೆನು. ಆತನು ಬೋಧಿಸಿದ ಅವರಿಗಾಗಿ ಊರಲಿರುವ ದೇವರ ರಾಜ್ಯದ ಸಂತಸದ ಸಂಗತಿಯನ್ನು ಕೇಳಿದವರೂ ಮತ್ತು ಬಡವರು ಮತ್ತು ಕೆಳವರ್ಗದವರ ಮನೆಗೆ ನಾನು ಆತನೊಡನೆ ಹೋದನು.
>
> ಕೇವಲ ಕೆಲ ಬೆಳ್ಳಿನಾಣ್ಯಗಳಿಗೆ ತನ್ನ ಒಡಯನಿಗೆ ಗುರುದ್ರೋಹ ಮಾಡಿದಂಥ ಯೂದನೊಡನೆ ತಿರಸ್ಕಾರ ಮತ್ತು ದುಃಖದಿಂದ ಮಿಶ್ರವಾದಂಥ ಬಾವನೆಯ ಜೊತೆ ನಾನು ಪಾಪವಿಲ್ಲದವನೊಬ್ಬನ ವಿರುದ್ಧ ಸುಳ್ಳು ಸಾಕ್ಷಿಹೇಳುವುದನ್ನು ಕೇಳಿದೆನು. ಕುಂದಿಲ್ಲದ ನೊಸಲಿಗೆ ಸೈನಿಕರು ಮುಳ್ಳಿನ ಕಿರೀಟವನ್ನು ತೊಡಿಸುತ್ತಿರುವುದನ್ನು ಮತ್ತು ಪವಿತ್ರವಾದ ಮೊಗದ ಮೇಲೆ ಉಗುಳುವುದನ್ನು ನಾನು ನೋಡಿದೆನು. ಯೇಸುವಿನ ರಕ್ತಕ್ಕಾಗಿ ಕೂಗುತ್ತಿರುವ ಜನಜಂಗುಳಿಯ ಕೂದನ್ನೂ ಮತ್ತು ಆತನನ್ನು ಕ್ರೂಜೆಗೆ ಹಾಕಬೇಕೆಂದು ಒತ್ತಾಯಿಸುವದೂ ಅದನ್ನು ಹಿಂಬಾಲಿಸಿದ್ದನ್ನು ನಾನು ಕೇಳಿದೆನು. ಸೈನಿಕರು ಮೊಳೆಯನ್ನು ಕಂಪಿಸುವ ದೇಹವನ್ನು ಕಟ್ಟಿಗೆಗೆ ಬಡಿಯುತ್ತಿರುವ ಸುತ್ತಿಗೆಯ ಕ್ಷೀಣಸ್ವರವನ್ನು ನಾನು ಕೇಳಿದೆನು, ಆದರೆ ಶಿಲುಬೆಯ ಮೇಲೆ ಅಡ್ಡಲಾಗಿ ಮಲಗಿಸಿದ ಆತನಿಂದ ಯಾವುದೇ ನರಳುವ ಸ್ವರವನ್ನು ನಾನು ಕೇಳಲಿಲ್ಲ.
>
> "ಅವಳ ಹೃದಯಕ್ಕೆ ಅಲಗು ನಟ್ಟಂತೆ" ಮರಿಯಳ ಮುಖದ ಮೇಲಿನ ತಲ್ಲಣದ ಅಸಹಾಯಕ ನೋಟವನ್ನು ಮತ್ತು ದುಃಖವನ್ನು ನಾನು ನೋಡಿದೆನು ಮತ್ತು ದೇವಕುಮಾರನು "ತಂದೆಯೇ ಅವರನ್ನು ಕ್ಷಮಿಸು ಅವರೇನು ಮಾಡುತ್ತಿದ್ದಾರೋ

ಅವರರಿಯರು" ಎಂದು ಹೇಳುವುದನ್ನು ಕೇಳಿದೆನು. ಸೂರ್ಯನು ಕತ್ತಲಾದದ್ದನ್ನೂ ಮತ್ತು ಸಂಗತಿಗಳು ಭಯಂಕರ ದೃಷ್ಯಕ್ಕೆ ವಿರುದ್ಧವಾದಂತೆ ಬಾಗಿಲಹೊರಗೆ ಆ ದಿನದಲ್ಲಿ ಪ್ರಕಟವಾದಂತೆ ಕಂಡಿದ್ದನ್ನು ನಾನು ನೋಡಿದೆನು. ಕೋಮಲವಾದ ಕರಗಳು ಜೀವಲ್ಲದ್ದನ್ನು ಮರದಿಂದ ತೆಗೆದುಕೊಂಡು ಪ್ರೀತಿ ಪೂರಕವಾಗಿ ಅದನ್ನು ಸಮಾಧಿಯಲ್ಲಿ ಇಟ್ಟದ್ದನ್ನು ನಾನು ನೋಡಿದೆನು.

ಮೂರನೆಯ ದಿನದ ಮುಂಜಾನೆ, ನಾನು ಕೌತುಕದಿಂದ ಸಮಾಧಿಯೊಳಕ್ಕೆ ನೋಡಿದೆನು ಮತ್ತು "ಆತನು ಇರಲ್ಲಿಲ್ಲ. ಆತನು ಹೇಳಿದಂತೆಯೇ ಆತನು ಎದ್ದಿದ್ದಾನೆ. ಕರ್ತನನ್ನು ಇಟ್ಟಿದ್ದ ಸ್ಥಳವನ್ನು ಬಂದು ನೋಡು" ಎಂದು ಹೇಳುವ ಪ್ರೋತ್ಸಾಹದಾಯಕ ಮಾತುಗಳನ್ನು ಕೇಳಿದೆನು. ಶಿಷ್ಯರೊಡನೆ ನಾನು, ಎಣ್ಣೆಮರಗಳ ಗುಡ್ಡವನ್ನೇರಿದನು ಮತ್ತು ಯೇಸು ತಿರುಗಿ ತನ್ನ ತಂದೆಯ ಬಳಗೆ ಹೋಗುವುದನ್ನು ನೋಡಿದೆನು. "ಯೇಸು ಪರಲೋಕಕ್ಕೆ ಹೋದ ರೀತಿಯಲ್ಲಿಯೇ ಆತನು ನಿಮ್ಮನ್ನು ಪರಲೋಕಕ್ಕೆ ಸೇರಿಸಲು ತಿರುಗಿ ಬರುವನು" ಎಂದು ದೇವದೂತರು ಹೇಳುವುದನ್ನು ಕೇಳಿದೆನು.

ಹೌದು, ನಾನು ಅಲ್ಲಿದ್ದೆನು. ಆ ಅದ್ಭುತವಾದ ಸನ್ನಿವೇಶಗಳು ಹೊಸ ಒಡಂಬಡಿಕೆಯಲ್ಲಿ ಸ್ಪುಟವಾಗಿ ಚಿತ್ರಿತವಾಗಿರುವದನ್ನು ಪದೇ ಪದೇ ಗ್ರಹಿಸಿದೆನು. ನೀವು ನೋಡುವುದಕ್ಕಾಗಿ ಕರ್ತನ ಕೊನೆಯ ದಿನದಲ್ಲಿ ನಾನು ಅಲ್ಲಿದ್ದೆನು, "ಇದನ್ನು ನನ್ನ ನೆನಪಿಗೋಸ್ಕರ ಮಾಡಿರಿ" ಎಂದು ಕರ್ತನು ಮೇಜಿನ ಬಳಿ ಆಜ್ಞೆ ಮಾಡಿದಾಗ ನಾನು ಆತನನ್ನು ಅಲ್ಲಿ ಭೇಟಿಯಾದೆನು.[1]

ನಮ್ಮ ಕ್ರಿಸ್ತೀಯ ಅನುಭವಕ್ಕಾಗಿಕರ್ತನ ಭೋಜನವು ಅವಷ್ಯವಾದದ್ದು ಎಂದು ನಂಬುತ್ತಾ, ನಾವು ಈ ಸ್ಮರಣೀಯ ಆಚರಣೆಯ ಮೇಲಿನ ನಮ್ಮ ಧ್ಯಾನದ ಆರಾಧನೆ ಯನ್ನಾಗಿಸಿಕೊಳ್ಳುವಾ.[2]

ಕರ್ತನ ಭೋಜನವು ಹೆಚ್ಚೂಕಡಿಮೆ ಎರಡುಸಾವಿರ ವರ್ಷಗಳ ಹಿಂದೆಯೇ ಯೇಸುವಿನಿಂದ ಸಂಸ್ಥಾಪಿತವಾಯಿತ್ತು. ಇದು ಕ್ರಿಸ್ತನು ಮರಣಸಲಿರುವ ಕೇಲವು ತಾಸುಗಳ ಮುನ್ನ ಆತನು ಮತ್ತು ಆತನ ಅಪೊಸ್ತಲರಿಂದ ಆಚರಿಸಲ್ಪಟ್ಟ ಪಸ್ಕದ ಊಟವಾಗಿತ್ತು. ಈ ಸತ್ಯವೇದೀಯ ವಿವರಣೆಯು ಮತ್ತಾಯ 26, ಮಾರ್ಕ 14, ಲೂಕ 22, ಮತ್ತು 1 ಕೊರಿಂಥ 11ರಲ್ಲಿ ಸಿಕ್ಕುವುದಾಗಿದೆ. 1 ಕೊರಿಂಥದಲ್ಲಿ ಪರಿಚ್ಛೇದವನ್ನು ಓದುತ್ತಿರುವಂತೆ ಪೂಜ್ಯಭಾವನೆಯಿಂದ ಕೇಳಿರಿ.

**ದೇವವಾಕ್ಯದ ಓದುವ ಭಾಗ: 1 ಕೊರಿಂಥ 11:23-29**

**ಹಾಡು.**

**ಟಿಪ್ಪಣಿಗಳು:**

ಮಾನವ ಜೀವಿಯು ಸಂಗತಿಗಳನ್ನು ಬಲುಬೇಗನೇ ಮರೆತುಬಿಡುತ್ತಾನೆ! ಈ ಕಾರಣಕ್ಕಾಗಿ, ನಮ್ಮ ಸ್ಮರಣೆಯನ್ನು ಕಲಕುವಂತ ಭವನಗಳನ್ನು ಮತ್ತು ಆಚರಣೆಗಳತೆಯೇ ನಾವು ಸ್ಮರಕಗಳನ್ನು ಸಂಸ್ಥಾಪಿಸಿದ್ದೇವೆ.[3] ವಾಸಿವಾಶಿಂಗ್ಟನ್ ಡಿಸಿಯಲ್ಲಿನ ಎರಡು ಚಿರಪರಿಚಿತ ಸ್ಮಾರಕಗಳು ಎಂದರೆ ವಾಶಿಂಗ್ಟನ್ ಸ್ಮಾರಕ ಮತ್ತು ಲಿಂಕನ್ ಮೆಮೋರಿಯಲ್ಸ್ ಆಗಿದೆ. ದೇವರ ಒಳ್ಳೆಯತನವನ್ನು ನೆನಪಿಸುವಂಥ ಕಾಮನಬಿಲ್ಲನ್ನು (ಆದಿಕಾಂಡ 9:8-17), ದೇವರು ತನ್ನೊಂದಿಗಿದ್ದಾನೆ ಎಂದು ನೆನಪಿಸುವವುದನ್ನು ಸೂಚಿಸಲು ಸಹಾಯಿಸುವ ಯಾಕೋಬನ ಕಲ್ಲುಗಳು (ಆದಿಕಾಂಡ 28:10-22), ಮತ್ತು ಇಸ್ರಾಯೇಲರನ್ನು ಐಗುಪ್ತದಿಂದ ವಿಮೋಚಿಸಿದ್ದನ್ನು ನೆನಪಿಸುವಥ ಪಸ್ಕ ಹಬ್ಬ (ವಿಮೋಚನಕಾಂಡ 12:14) ಇವನ್ನು ಒಳಗೊಂಡ ಅನೇಕ ಸ್ಮರಣೀಯ ಸಂಗತಿಗಳನ್ನು ಬೈಬಲ್ ಹೇಳುವುದಾಗಿದೆ. ಇಂದು ನಾವು ಪ್ರೀಯರ ಸಮಾಧಿಯನ್ನು ಕಟ್ಟುವವರಾಗಿದ್ದೇವೆ ಇದರ ಮೂಲಕ ಅವರು ಸದಾ ನೆನಪಿನಲ್ಲಿ

ಉಳಿಯುವರು. ಆ ಜನರು ಬಲು ಬೇಗನೇ ಮರೆತುಬಿಡುವರೆಂದು ಅರಿತುಕೊಂಡು, ಯೇಸು ಎಲ್ಲರಿಗೂ ಶ್ರೇಷ್ಟವಾದ ಸಂಸ್ಕಾರವೊಂದನ್ನು ಸ್ಥಾಪಿಸಿದನು ಅದೇ ಕರ್ತನ ಭೋಜನ.

ಆ ಸ್ಮರಣೆಗಾಗಿ, ಆತನು ತಾನು ಬಯಸಿದ ವಸ್ತುಗಳನ್ನು ಆಯ್ಕೆಮಾಡಬಹುದಿತ್ತು, ಸಂಗಮರಿಕಲ್ಲು, ಶ್ರೇಷ್ಟವಾದ ಲೋಹ, ಅಮೂಲ್ಯವಾದ ರತ್ನಗಳು, ಎಲ್ಲವೂ ಬಳಕೆಯಾಗಬಹುದಿತ್ತು ಆತನ ಎಂದಿಗೂ ಕಟ್ಟದಿರುವ ಬಲು ದುಬಾರಿಯಾದಂಥ ಬಲು ಯೋಗ್ಯವಾದ ಈ ಸ್ಮರಣಾರ್ಥಕ್ಕೆ. ಹೇಗೋ ಆತನು ಭೂಮಿಯಿಂದ ಬಲು ಸಾಮಾನ್ಯವಾದ ಎರಡು ವಸ್ತುಗಳನ್ನು ತೆಗೆದುಕೊಂಡನು.

(1) *ರೊಟ್ಟಿ.* "ಅವರು ಊಟಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಶಿಷ್ಯರಿಗೆ ಕೊಟ್ಟು ತಕ್ಕೊಳಿರಿ ತಿನ್ನಿರಿ ಇದು ನನ್ನ ದೇಹ ಅಂದನು" (ಮತ್ತಾಯ 26:26). ರೊಟ್ಟಿಯು ಅಸ್ತಿತ್ವದಲ್ಲಿರುವ ಬಲು ಸಾಮ್ಯಾನವಾದ ಆಹಾರ; ಹೆಚ್ಚಾಗಿ ಎಲ್ಲಡೆ ಎಲ್ಲರೂ ರೊಟ್ಟಿಯನ್ನು ತಿನ್ನವವರಾಗಿದ್ದಾರೆ. ಹೆಚ್ಚಾದ ರೊಟ್ಟಿಯು ಮೂಲ ಸಾಮುಗ್ರಿಯು ಭೂಮಿಯ ಮೇಲಿನ ಸಾಮಾನ್ಯವಾದ ಕಾಳಾದ ಗೋದಿಯು ಆಗಿದೆ.

ಕ್ರಿಸ್ತನು ಯಾವತರದ ರೊಟ್ಟಿಯನ್ನು ಬಳಸಿದನು? ಕರ್ತನ ಭೊಜನವನ್ನು ಆಚರಿಸುವಾಗ saltine crackers,[4] ಫ್ರೆಂಚ ಬ್ರೆಡ್,[5] ಅಥವಾ ಇತರ ಹುಳಿಹಿಟ್ಟಿನ ರೊಟ್ಟಿಗಳನ್ನು ಏನೂ ತಿಳುವಳಿಕೆಯಿಲ್ಲದವರೂ ಕೊಡಾ ತಿಳಿದಿದ್ದಾರು. ಹೇಗೋ ಯೇಸು ಪಸ್ಕ ಹಬ್ಬಕ್ಕಿಂತ ಮುಂಚೆ ಈ ಭೋಜನವನ್ನು ಸಂಸ್ಥಾಪಿಸಿದನು ಎಂಬುದನ್ನು ನೆನಪಿಡಿರಿ (ಮತ್ತಾಯ 26:19). ಆ ಹಬ್ಬಕ್ಕೆ ಮುನ್ನ, ಎಲ್ಲ ಹುಳಿಹಿಟ್ಟು[6] ಮನೆಯಿಂದ ತೆಗೆದುಹಾಕಲ್ಪಡಬೇಕಿತ್ತು (ವಿಮೋಚನಕಾಂಡ 12:15); ಹಬ್ಬದಲ್ಲಿ ಬಳಕೆಯಾಗುವ ರೊಟ್ಟಿಯು ಮಾತ್ರ ಹುಳಿಯಿಲ್ಲದೆ ರೊಟ್ಟಿಯಾಗಿದ್ದು (ವಿಮೋಚನಕಾಂಡ 12:8). ವಿಷೇಶವಾಗಿ ಕ್ರಿಸ್ತ ದೇಹವನ್ನು ಪ್ರತಿನಿಧಿಸುವಂತಿರುವುದಕ್ಕೆ ಯೋಗ್ಯವಾದದ್ದು ಆಗಿತ್ತು: ಹೊಸಒಡಂಬಡಿಕೆಯಲ್ಲಿ, ಹುಳಿಹಿಟ್ಟು ಪಾಪದ ಪ್ರಭಾವವು. ಯಾವಗಲೂ ಇರುವುದನ್ನು ಪ್ರತಿನಿಧಿಸಲು ಬಳಸುವುದಾಗಿದೆ (ನೋಡಿರಿ 1 ಕೊರಿಥ 5:8). ಹುಳಿಯು ಇಲ್ಲದ ರೊಟ್ಟಿಯು ಕ್ರಿಸ್ತನ ಪಾಪರಹಿತ ದೇಹದ ಚಿನ್ಹೆಯಂತೆ ಹೊಂದಿಕೆಯಾಗಿದೆ (ಇಬ್ರೀಯ 4:15).[7]

(2) *(ದ್ರಾಕ್ಷಾ) ಹಣ್ಣಿನ ರಸ.*

> ಆಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅತನಿಗೆ ಕೊಟ್ಟು "ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ ... ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವುದೇ ಇಲ್ಲ" (ಮತ್ತಾಯ 26:27-29) ಎಂದು ಹೇಳಿದನು.

ಆಸಮಯದಲ್ಲಿ ಆಸ್ಥಳದಲ್ಲಿ "ಹಣ್ಣಿನ ರಸ" ದ್ರಾಕ್ಷೆಯ ಹಣ್ಣೀನ ರಸವನ್ನು ಸೂಚಿಸುವುದಾಗಿದೆ. ಗ್ರೀಕ ಪದವಾದ "ರಸ" (*oinos*) ಎಂಬುದು ಕರ್ತನ ಭೋಜನದ ಪರಿಚ್ಚೇದದಲ್ಲಿ ಬಳಸಲ್ಪಟ್ಟಿದೆ ಆದರೆ "ಹಣ್ಣೀನ ರಸ"ದ ಬದಲು ದ್ರಾಕ್ಷಾರಸ ಎಂಬಪದವು ಒಳಗೊಂಡಿದೆ. ದ್ರಾಕ್ಷೆಯ ಸಹ ಆಹಾರದ ಸಾಮಾನ್ಯವಾದ ಪದರ್ಥವಾಗಿದೆ; ಗೋದಿಯ ಹಾಗೆ ಸಾರ್ವರ್ತಿಕವಾಗಿರದೇ ಹೋದರೂ, ದ್ರಾಕ್ಷೆಯು ಹೆಚ್ಚಾಗಿ ಸ್ಥಳೀಯವಾಗಿ ಕೊಳ್ಳಲ್ಪಡುತ್ತಿತ್ತು.[8] ತಿರುಗಿ, "ಹಣ್ಣಿನ ರಸ"ವು ಅನ್ಯೋನಭೋಜನದ ಈ ಭಾಗಕ್ಕಾಗಿ ಹೊಂದಿಕೆಯಾಗುವುದಾಗಿದೆ. ಕಾಕತಾಳೀಯವಾಗಿಯೋ ಅಥವಾ ಇಲ್ಲವೋ ಹೆಚ್ಚಾದ ದ್ರಾಕ್ಷಾರಸದ[9] ಹೆಚ್ಚಿನ ಕೆಂಪು ಛಾಯೆಯು ಕ್ರಿಸ್ತನ ದೇಹವನ್ನು ಯೋಗ್ಯವಾಗಿ ಪ್ರತಿನಿಧಿಸುವುದರ ಮೂಲಕ ನಮ್ಮಲ್ಲಿ ಅನೇಕರನ್ನು ಎಚ್ಚಿಸುವುದಾಗಿದೆ.

ಯೇಸು ಈ ಸರಳವಾದ ಸಂಸ್ಕಾರಗಳನ್ನು ಸಂಸ್ಥಾಪಿಸುವುದಕ್ಕಾಗಿ ಎರಡು ಸರಳ ಸಂಗತಿಗಳನ್ನು ಬಳಸಿದನು: ಹುಳಿಯಿಲ್ಲದ ರೊಟ್ಟಿ ಮತ್ತು ದ್ರಾಕ್ಷಾರಸ. ದುರದೃಷ್ಟವಾಗಿ,

ಇದು ಕೆಲವಕ್ಕೆ ಬಲು ಸರಳವಾದದ್ದೂ ಆಗಿದೆ ಮತ್ತು ಅವುಗಳು ಅನ್ಯೋನ್ಯ ಭೋಜನಕ್ಕಾಗಿ ಉತ್ಪಾದಿಸಲು ರಹಸ್ಯವಾಗಿ ಮಾಡಲ್ಪಟ್ಟದ್ದು ಆಗಿದೆ. ರೊಟ್ಟಿಯು ಅಕ್ಷರಸಹ ಯೇಸುವಿನ ದೇಹವಾಗಿಯೂ ಮತ್ತು ದ್ರಾಕ್ಷಾರಸವು ಅಕ್ಷರಸಹ ರಕ್ತವಾಗಿ ಮಾರ್ಪಡುವ ಮುನ್ನ (ಇದು ಪ್ರತಿಪಾದಿಸಿದಂತೆ) ಈ ವಿಶವಾದ ಆಚರಣೆಯು "ಗುಂಪು" ಎಂದು ಕೆರೆಯಲ್ಪಟ್ಟಿದ್ದು ವಿಕಸಿಸಲ್ಪಟ್ಟದ್ದಾಗಿದೆ. (ಈ ವಸ್ತುಗಳು ಇನ್ನೂ ನೋಡಲು ಮತ್ತು ಅಸ್ವಾದಿಸಲು ರೊಟ್ಟಿ ಮತ್ತು ದ್ರಾಕ್ಷಾರಸದಂತೆ ಇವೆ ಎಂದು ಅವರು ಒಪ್ಪಿಕೊಳ್ಳುತ್ತಾರೆ, ಆದರೆ ಅದಲ್ಲದೇ ಅವುಗಳು ಅಕ್ಷರಸಹ ಕರ್ತನ ದೇಹ ಮತ್ತು ರಕ್ತವಲ್ಲ ಎಂದೂ ಅವರು ಸೂಚಿಸುವವರಾಗಿದ್ದಾರೆ.) ಇದನ್ನು ಸಮರ್ಥಿಸಿಕೊಳ್ಳುವ ನಿಟ್ಟಿನಲ್ಲಿ, ಅವರು ಯೇಸು ಹೇಳಿದ "*ಇದು* ನನ್ನ ದೇಹ" ಮತ್ತು "*ಇದು* ನನ್ನ ರಕ್ತ" ಎಂಬುದನ್ನು ಸೂಚಿಸುವವರಾಗಿದ್ದಾರೆ (ಮತ್ತಾಯ 26:26, 28; ಒತ್ತಿ ಹೇಳಿದ್ದು ನನ್ನದು).

ಬೈಬಲನ್ನು ವ್ಯಾಖ್ಯಾನಿಸಲು ಸಾಮಾನ್ಯಜ್ಞಾನವು ಇಲ್ಲಿ ಅವಷ್ಯವಿದೆ. ಯೇಸು ತನ್ನ ಶಿಷ್ಯರ ಮುಂದೆ ನಿಂತರುವುದರಿಂದ ಆತನ ದೇಹವು ಅಖಂಡವಾಗಿತ್ತು ಮತ್ತು ರಕ್ತವು ಆತನ ನಾಳಗಳ ಮೂಲಕ ಪ್ರವಹಿಸುತ್ತು ರೊಟ್ಟಿ ಮತ್ತು ದ್ರಾಕ್ಷಾರಸಗಳು ಅಕ್ಷರಸಹ ದೇಹ ಮತ್ತು ರಕ್ತವೆಂಬುದು ಆತನ ಮಾತಿನ ಅರ್ಥವಲ್ಲ. ಅದು ಆತನು ಯಾವಗಲೂ ಬಳಸುತ್ತಿದ್ದ ಶಬ್ದಾಲಂಕಾರವಾಗಿತ್ತು. "*ನಾನು* ದ್ರಾಕ್ಷಾಬಳ್ಳಿ ಆಗಿದ್ದೇನೆ" ಮತ್ತು "*ನಾನೇ* ಬಾಗಿಲು ಆಗಿದ್ದೇನೆ" ಎಂದು ಆತನು ಹೇಳಿದನು (ಯೇಹಾನ 15:5; 10:9; ಒತ್ತಿ ಹೇಳಿದ್ದು ನನ್ನದು).[10] ಆತನು ಅಕ್ಷರಸಹ ದ್ರಾಕ್ಷಾಬಳ್ಳಿ ಎಂದು ಆತನು ಹೇಳಲಿಲ್ಲ (ಆತನು ತೂಗಾಡುತ್ತಿರುವ ದ್ರಾಕ್ಷೆಯನ್ನು ತನ್ನ ಮೈಮೇಲೆ ಹೊಂದಿರಲಿಲ್ಲ) ಅಥವಾ ಆತನು ಅಕ್ಷರಸಹ ಬಾಗಿಲು ಆಗಿರಲಿಲ್ಲ (ಆತನು ತೂಗುವದನ್ನೂ, ಕೊಂಡಿಯನ್ನೂ ಹೊಂದಿರಲಿಲ್ಲ). ಬದಲಾಗಿ, ಆತನ ಮತ್ತು ದ್ರಾಕ್ಷೆಯ ಮಧ್ಯ, ಆತನಲ್ಲೂ ಮತ್ತು ಬಾಗಿಲಿನ ಮಧ್ಯ ಕೆಲ ಸಮಾನ ಅಂಶಗಳು ಇವೆ ಎಂಬುದು ಆತನ ಅರ್ಥವಾಗಿತ್ತು.

ಈ ಶಬ್ದಾಲಂಕಾರವು ಸಾಮಾನ್ಯವಾದದ್ದಾಗಿತ್ತು. ನಾನು ಒಂದು ಚಿತ್ರವನ್ನು ತೋರಿಸಿ "ಇವಳು ನನ್ನ ಹೆಂಡತಿ" ಎಂದು ತೋರಿಸಿದರೆ ಈ ಚಿತ್ರವು ತಾನೇ ನನ್ನ ಹೆಂಡತಿ ಆಗಿರಲಾರದು ನೀವು ಯೋಚಿಸಲಾರಿರಿ. ಈ ಚಿತ್ರವು ನನ್ನ ಹೆಂಡತಿಯನ್ನು ಪ್ರತಿನಿಧಿಸುವಂತವುಗಳು ಆಗಿವೆ.

ಯೇಸು ಹೇಚ್ಚಾಗಿ ನಾಶವಾಗುವ ಮಸ್ತುಗಳಿಂದ ನಾಶವಾಗದ ಅಂಶಗಳನ್ನು ಸ್ಥಾಪಿಸಿದನು. ಕಲ್ಲು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ, ಅಮೂಲ್ಯವಾದ ಲೋಹವು ತುಕ್ಕುಹಿಡಿಯಬಹುದು, ರತ್ನಗಳು ಕಳುವುಮಾಡಲ್ಪಡಬಹುದು, ಆದರೆ ಗೋದಿ ಮತ್ತು ದ್ರಾಕ್ಷೆಯು ನಿರಂತರವಾಗಿ ಇರುವವು ಆಗಿವೆ. ಈ ಸ್ಮರಣೀಯ ಸ್ಥಳಗಳ ಭೇಟಿಗಾಗಿ ನಾವು ಯೆರೂಸಲೇಮಿಗೆ ಅಥವಾ ಇತರ ಕೆಲ ಅಂತರದಲ್ಲಿಯ ಸ್ಥಳಗಳಿಗೆ ಯಾತ್ರೆಯನ್ನು ಮಾಡಿಲ್ಲ; ಬದಲಾಗಿ ಇದು ಎಲ್ಲರಿಗೂ ಸುಲಭವಾಗಿ ಸಿಕ್ಕುವಂತದ್ದಾಗಿದೆ, ಇದು ಕೈಗೆ ನಿಲುಕುವಂತದ್ದೂ ಆಗಿದೆ; ಬಡವರೂ ಕೂಡಾ ಈ ಸರಳವಾದ ಎರಡು ಪದಾರ್ಥಗಳನ್ನು ಕೊಳ್ಳಬಹುದಾಗಿದೆ. ಈ ಸಂಸ್ಕಾರವು ಶುದ್ದತೆಯ, ದಿವ್ಯತೆಯ ಪ್ರೇರೇಪಿತ ವಿವೇಚನೆ ಆಗಿದೆ.

**ಹಾಡು.**

**ಪ್ರಾರ್ಥನೆ.**

**ಟಿಪ್ಪಣಿಗಳು:**

ಜನರು ಕರ್ತನ ಭೋಜನದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುವವರಾಗಿರುತ್ತಾರೆ. ಉದಾಹರಣೆಗೆ, "ಪ್ರಭುಭೋಜನ," "ಜನರ ಗುಂಪು" ಮತ್ತು "ಸಂಸ್ಕಾರ" ಇಂಥ ಪದಗಳನ್ನು ಅವರು ಕೇಳಿದಾಗ "ಈ ಆಚರಣೆಯು ಏನೆಂದು ಕರೆಯಲ್ಪಡಬೇಕು?" ಎಂದು ಅವರು ಆಚ್ಚರಿಗೊಳ್ಳುವರು. ದೇವವಾಕ್ಯದಲ್ಲಿನ ನಾಲ್ಕು ನಿಭಂಧನೆಗಳು ಈ ಸಂಸ್ಕಾರವನ್ನು: "ಕರ್ತನ

ಭೋಜನ" (1 ಕೊರಿಂಥ 11:20); "ರೊಟ್ಟಿ ಮುರಿಯುವದು" (ಅಪೊಸ್ತಲರ ಕೃತ್ಯಗಳು 2:42; ನೋಡಿ ಇದನ್ನೂ ಸಹ ನೋಡಿರಿ ಅಪೊಸ್ತಲರ ಕೃತ್ಯಗಳು 20:7); "ಅನ್ಯೋನ್ಯ ಭೋಜನ" (1 ಕೊರಿಂಥ 10:16; KJV[11]) ಮತ್ತು "ಕರ್ತನ ಮೇಜು" (1 ಕೊರಿಂಥ 10:21) ಎಂದು ಸೂಚಿಸುತ್ತವೆ. ನಾವೂ ಸಹ ಈ ಸತ್ಯವೇದೀಯ ಪದಗಳ ಜೊತೆ ಇರುವವರಾಗಿದ್ದೇವೆ (1 ಪೇತ್ರನ 4:11).

ಬಹುಶಃ ಬಲು ಸಾಮಾನ್ಯವಾಗಿ ಕೇಳಲ್ಪಡುವ ಪ್ರಶ್ನೆಯೆಂದರೆ "ನಾವು *ಯಾವಾಗ* ಪಾಲುತೆಗೆದುಕೊಳ್ಳಬೇಕು?" ಎಂಬುದೇ. ಈ ಸಂಸ್ಕಾರವನ್ನು ಯೇಸು ಸಂಸ್ಥಾಪಿಸಿದಂತೆ ಆತನು "ನೀವು ಈ ರೊಟ್ಟಿಯನ್ನು *ತಿಂದು* ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನೂ ಆತನು ಬರುವತನ ಪ್ರಸಿದ್ಧಿ ಪಡಿಸುತ್ತೀರಿ ..." ಎಂದು ಹೇಳಿದನು (1 ಕೊರಿಂಥ 11:26; ಒತ್ತಿ ಹೇಳಿದ್ದು ನನ್ನದು), ಇಲ್ಲಿ ಎಷ್ಟು ಎಂಬುದಿರದೇ ಮಾಡುವಷ್ಟು ಸಾರಿ ಎಂದಿದೆ. ಅಂತೆಯೇ ತಾವು ಯಾವಾಗ ಬಯಸುತ್ತಾರೋ ಆಗಲಿಲ್ಲ ತಾವು ಭಾಗವಹಿಸಬಹುದೆಂದು ಕೆಲವರು ಪರಿಗಣಿಸುವವರಾಗಿದ್ದಾರೆ. ಊರಿಗೆ ಹತ್ತಿರವಿರುವ ಚರ್ಚಿನಲ್ಲಿ ಅದರ ಚಿನ್ಹೆಯಲ್ಲಿ "ಭಾನವಾರ - ಪವಿತ್ರ ಸಹಭಾಗಿತ್ವ [ಸಮಯ]; ಬುಧವಾರ - ಪವಿತ್ರ ಸಹಭಾಗಿತ್ವ [ಸಮಯ]; ಗುರುವಾರ ಮತ್ತು ಪವಿತ್ರ ದಿನಗಳು - ಪವಿತ್ರ ಸಹಭಾಗಿತ್ವ [ಸಮಯ] ಎಂಬ ಸಂದೇಶವನ್ನು ಹೊಂದಿತ್ತು."

"ಯಾವಾಗ?" ಎನ್ನುವುದಕ್ಕೆ ಸತ್ಯವೇದೀಯ ಉತ್ತರವು ಆದಿಸಭೆಯ ಉದಾಹರಣೆಯಲ್ಲಿ ಸಿಕುವುದಾಗಿದೆ; ಕ್ರೈಸ್ತರು "ವಾರದ ಮೊದಲನೆಯ ದಿನದಲ್ಲಿ" (ಅಪೊಸ್ತಲರ ಕೃತ್ಯಗಳು 20:7), ಆದಿಸಭೆಯ ಸಾರ್ವಜನಿಕ ಕೂಟದ ವಿಶೇಶ ದಿನದಲ್ಲಿ ಕರ್ತನ ಭೋಜನದಲ್ಲಿ ಪಾಲ್ಗೊಳ್ಳುತ್ತಿದ್ದರು (1 ಕೊರಿಂಥ 16:1, 2). ಅನ್ಯೋನ್ಯ ಭೋಜನವು ವಾರದ ಮೊದಲ ದಿನಕ್ಕಿಂತಲೂ ಯಾವುದೇ ದಿನದಲ್ಲಿ ಇರಬಹುದು ಅಲ್ಲಿ ಯಾವುದೇ ಸತ್ಯವೇದಿಯ ಸಂಸ್ಥಾಪಿಲ್ಪಟ್ಟ ಆಚಾರಗಳೂ ಇಲ್ಲ. ವಾರದ ಮೊದಲ ದಿನವು (ನಾವು ಸಬ್ಬತ್ ಎಂದು ಕರೆಯಲ್ಪಡುವ ದಿನ) ಕ್ರೈಸ್ತರಿಗಾಗಿ ವಿಶೇಷ ನೆನಪುಗಳನ್ನು ಹೊಂದಿದೆ; ಕ್ರಿಸ್ತನು ವಾರದ ಮೊದಲ ದಿನದಲ್ಲಿ ಎದ್ದನು ಮತ್ತು ಅದೇ ದಿನ ತನ್ನ ಶಿಷ್ಯರಿಗೆಲ್ಲ ಕಾಣಿಸಿಕೊಂಡನು (ಮತ್ತಾಯ 28:1-6 ಮತ್ತು ತಿರುಗಿ ಯೋಹಾನ 20:26ರಲ್ಲಿ). ಆದಿಸಭೆಯು ಸಂಸ್ಥಾಪಿಸಲ್ಪಟ್ಟಿದ್ದು ವಾರದ ಮೊದಲನೆಯ ದಿವಸವೇ (ಅಪೊಸ್ತಲರ ಕೃತ್ಯಗಳು 2:1-4; ಯಾಜಕಕಾಂಡ 23:15, 16).

ಸತ್ಯವೇದೀಯ ಮಾಹಿತಿಯೂ ಸಹ ಪ್ರತಿ ವಾರದ ಮೊದಲನೆಯ ದಿನದಲ್ಲಿ ಕರ್ತನ ಭೋಜನದಲ್ಲಿ ಪಾಲ್ಗೊಳ್ಳುತ್ತಿತ್ತು ಎಂದು ನಮಗೆ ಸೂಚಿಸುವುದಾಗಿದೆ: ಅವರು "ವಾರದ ವೊದಲನೆಯ ದಿನದಲ್ಲಿ" ಭೇಟಿಯಾಗುತ್ತಿದ್ದರು (1 ಕೊರಿಂಥ 16:2)[12] ಮತ್ತು ಅವರು ಹಾಗೆ ಭೇಟಿಯಾದಗ ಅವರು "ರೊಟ್ಟಿಯನ್ನು *ಮುರಿಯುವುದರಲ್ಲಿ*" ಪಾಲ್ಗೊಳ್ಳುತ್ತಿದ್ದರು (ಅಪೊಸ್ತಲರ ಕೃತ್ಯಗಳು 20:7; ಒತ್ತಿ ಹೇಳಿದ್ದು ನನ್ನದು). ಅನ್ಯೋನ್ಯ ಭೋಜನದಲ್ಲಿ ಪ್ರತಿದಿನವೂ ಕರ್ತನ ಆರಾಧನೆಯ ಕೇಂದ್ರವಾಗದ್ದುದರಿಂದ, ಅವರಆಚರಣೆಯು ವಾರವಾರವೂ ಇರುವುದಾಗಿತ್ತು. ಸಭೆಯ ಹಿಂದಿನ ಶತಮಾನದ ಕ್ರೈಸ್ತೀಯ ಲೇಖಕರಿಂದ ಈ ಸಮಾರೋಪವು ದೃಢೀಕರಿಸಲ್ಪಟ್ಟಿದೆ.[13] ಐತಿಹಾಸಿಕಕಾರನಾದ John Laurence Mosheim ಈ ರೀತಿ ಬರೆ ಯುತ್ತಾನೆ "ಕ್ರೈಸ್ತೀಯ ಆರಾಧನೆಯು ಸಂಗಿತಗಳನ್ನು, ಪ್ರಾರ್ಥನೆಯನ್ನೂ ಮತ್ತು ದೇವವಾಕ್ಯ ಓದುವುದನ್ನೂ. ಜನರಿಗೆ ಸಂದೇಶ ನೀಡುವುದನ್ನೂ ಒಳಗೊಂಡಿದ್ದು ಮತ್ತು ಕರ್ತನ ಭೋಜನದ ಆಚರಣೆಯಲ್ಲಿ ಮುಕ್ತಾಯಗೊಳ್ಳುತ್ತದೆ."[14]

ಇದಕ್ಕೆ ಸಂಭಂಧಿಸಿದ ಇನ್ನೊಂದು ಪ್ರಶ್ನೆಯು "ಈ ಸ್ಮರಣೆಯ *ಯಾರನ್ನು* ಉದ್ದೇಶಿಸಿದೆ?" ದ್ರಾಕ್ಷಾರಸವು ಅನೇಕ ಪಾಪಗಳ ಕ್ಷಮಾಪಣೆಗೋಸ್ಕರ ಸುರಿಸಲ್ಪಟ್ಟ ತನ್ನ "ರಕ್ತವನ್ನು" ಪ್ರತಿನಿಧಿಸುತ್ತದೆ ಎಂದು ಯೇಸು ಹೇಳಿದನು (ಮತ್ತಾಯ 26:28). ಆದ್ದರಿಂದ ಇದು ರಕ್ತವು ತರುವ ಕ್ಷಮೆಯ ಅನುಭವವನ್ನು ಹೊಂದಿರುವವರಿಗೆ ಇದು ವಿಶೇಶ ಚಿನ್ಹೆಯನ್ನು ಹೊಂದಿದೆ

(ಅಪೊಸ್ತಲರ ಕೃತ್ಯಗಳು 2:38; 20:28; ಪ್ರಕಾರ 1:5, 6). ಮುಂದೆ, ಯೇಸು ಈ ಭೋಜನವನ್ನು ದೇವರ ರಾಜ್ಯದ ಸಂಸ್ಥಾಪನೆ ಎಂದು ಸೂಚಿಸಿದನು (ಮತ್ತಾಯ 26:29). ಸಭೆಯು ರಾಜ್ಯವಾಗಿದ್ದುದರಿಂದ (ಮತ್ತಾಯ 16:18, 19), ಕರ್ತನ ಸಭೆಯ ಸದಸ್ಯರಿಗಾಗಿನ ಸ್ಮರಣೆಯು ಇದಾಗಿದೆ. ಇದು ಹೀಗಿರುವಾಗ, ಜಗತ್ತಿನ ಕೆಲಭಾಗಗಳಲ್ಲಿ ಅನ್ಯೋನ್ಯ ಭೋಜನಕ್ಕೆ ಕೇವಲ ಕ್ರೈಸ್ತರೂ ಮಾತ್ರ ಆಮಂತ್ರಿತರಾಗುತ್ತಾರೆ. 1 ಕೊರಿಂಥ 11:28 ರಲ್ಲಿನ "ಆದರೆ ಮನುಷ್ಯನು ತನ್ನನ್ನು ತಾನು ಪರೀಕ್ಷಿಸಿಕೊಳ್ಳಬೇಕು"[15] ಎಂಬುದನ್ನು ಈ ಪರಿಸ್ಥಿತಿಗೆ ಅನ್ವಯಿತವಾಗುವದೆಂದು ಅನೇಕ ಸ್ಥಳೀಯ ಸಭೆಗಳು ನಂಬುತ್ತವೆ. ಆದ್ದರಿಂದ ಅನ್ಯೋನ್ಯ ಭೋಜನಕ್ಕಿಂತ ಮುನ್ನ ಉಪಸ್ಥಿತವಿರುವವರು ಪಾಲು ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂದು ನಿರ್ಧರಿಸಿ ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಡುವುದೇ ಆಗಿದೆ.

**ಹಾಡು.**

**ಟಿಪ್ಪಣಿಗಳು:**

ನಾವು ಈಗ ಎಲ್ಲಕ್ಕಿಂತ ಪ್ರಮುಖ ಪ್ರಶ್ನೆಗೆ ಬಂದಿದ್ದೇವೆ: "ಕರ್ತನ ಭೋಜನದ ಉದ್ದೇಶವು ಯಾವುದು?" ಎಂಬುದೇ. ತಿರುಗಿ, ಕೆಲವರು ದೇವರ ವ್ಯವಸ್ಥೆಯ "ಸರಳತೆ" ಯೊಡನೆ (2 ಕೊರಿಂಥ 11:3) ಮತ್ತು ಸಂಧರ್ಭದ ದಿವ್ಯ ಅರ್ಥದ ಆಶೀರ್ವಾದದ ದೋಷಾ ರೋಪಣೆಯೊಡನೆ ತೃಪ್ತರಾಗರು. ಪಾಲ್ಗೊಳ್ಳುವ ಉದ್ದೇಶವು ಪಾಪವನ್ನು ಅಳಿಸುವದನ್ನು ಪಡೆಯುವುದು ಎಂದೂ ಕೂಡಾ ಕೆಲವರು ಭೋಧಿಸುವವರಾಗಿದ್ದಾರೆ.

ಹಿಂದೆ ಸೂಚಿಸಿದಂತೆ, ಹೂಸಒಡಂಬಡಿಕೆಯ ಪ್ರಕಾರ, ಕರ್ತನ ಭೋಜನವು ಸ್ಮರಣೀಯವಾದ ಆರಾಧನೆ ಆಗಿದೆ. ನಮ್ಮಲ್ಲಿ ಕೆಲವರು ಸ್ಮಾರಕ ಚಿನ್ಹೆಗಳನ್ನು - ಚಿತ್ರಗಳನ್ನು ಮತ್ತು ವೈಯಕ್ತಿಕ ಸ್ಮಾರಕಗಳನ್ನು ಹೊಂದಿದ್ದು ಇದು ನಮಗೆ ವಿಷೇಶ ವ್ಯಕ್ತಿಗಳನ್ನು ಮತ್ತು ವಿಷೇಶ ಘಟನೆಗಳನ್ನು ನೆನೆಪಿನಲ್ಲಿಟ್ಟುಕೊಳ್ಳಲು ನಮಗೆ ಸಹಾಯಿಸುವುದಾಗಿದೆ. ನಾವು ಅನ್ಯೋನ್ಯ ಭೋಜನದಲ್ಲಿ ಪಾಲ್ಗೊಳ್ಳುವಾಗ ನಮಗೆ ಐದು ದೃಷ್ಟಿಕೋನಗಳಿರಬೇಕು ಎಂದು ಇದು ನಮಗೆ ಸೂಚಿಸುವುದಾಗಿದೆ:

- ನಾವು ಶಿಲುಬೆಯೆಡೆಗೆ *ಹಿಂತಿರಿಗಿ* ನೋಡಬೇಕು ಮತ್ತು ಯೇಸು ನಮಗಾಗಿ ಮಾಡಿದ್ದನ್ನು ನೆನೆಪಿನಲ್ಲಿಟ್ಟುಕೊಳ್ಳಬೇಕು.
- ನಾವು ಈಗ ಪರಲೋಕದಲ್ಲಿರುವ ಯೇಸುವಿನ *ಮೇಲೆ* ಕಡೆಗೆ ನೋಡಬೇಕು. ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವ ಮೂಲಕ, ಆತನು ಮರಣದಿಂದ ಎದ್ದನು ಮತ್ತು ತಂದೆಯೆಡೆಗೆ ಏರಿಹೋಗಿದ್ದಾನೆ ಎಂದು ನಾವು ಧೃಡೀಕರಿಸಬೇಕು. ಕ್ರಿಸ್ತನು ತನ್ನ ತಂದೆಯ ಬಲಪಾರ್ಶ್ವದಲ್ಲಿ ಕೂತುಕೊಂಡು ನಮಗಾಗಿ ಬೇಡುವವನಾಗಿದ್ದಾನೆ (ರೋಮಾಪುರ 8:34) ಎಂದು ಅನ್ಯೋನ್ಯ ಭೋಜನದ ಆರಾಧನೆಯು ಭರವಸೆಯನ್ನು ನಮಗೆ ಕೊಡುವುದಾಗಿದೆ.
- ಕ್ರಿಸ್ತನ ಎರಡನೆಯ ಬರೋಣದ ಕಡೆಗೆ ನಾವು ಮುನ್ನೋಡುವವರಾಗಿರಬೇಕು. ಕ್ರಿಸ್ತನು "ಬರುವವರೆಗೂ" ನಾವುಕರ್ತನ ಮರಣವನ್ನು ಘೋಷಿಸುವವರಾಗಿದ್ದೇವೆ ಎಂದು ಪೌಲನು ಬರೆಯುತ್ತಾನೆ (1 ಕೊರಿಂಥ 11:26). ಈ ಅರ್ಥದಲ್ಲಿ ಅನ್ಯೋನ್ಯ ಭೋಜನವು ಆತನ ಹಿಂತಿರುಗುವಿಕೆಯನ್ನು ಪ್ರತಿಪಾದಿಸುವ ಕಾರ್ಯವಾಗಿದೆ. ಪಾಲ್ಗೊಳ್ಳುವದು, ಪರಲೋಕದಲ್ಲಿ ನಾವು ಆತನೊಡನೆ ಅನ್ಯೋನ್ಯ ಭೋಜನಕ್ಕಾಗಿ ಕೂಳಿತುಕೊಳ್ಳುವಂತಹ "ದೊಡ್ಡ ಮದವೆಯ ಸಮಾರಂಭದ" ಪೂರ್ವಾನುಭವವು ಆಗಿದೆ (ಪ್ರಕಾರ 19:7, 9).
- ಸಹ ಕ್ರೈಸ್ತರೆಡೆಗೆ ಹೊರ ನೋಟವನ್ನು ನಾವು ಹರಿಸಬೇಕು. ನಾವು ಕ್ರಿಸ್ತನೊಂದಿಗೆ

ಮಾತ್ರವಲ್ಲ ಆದರೆ ನಾವು ಒಬ್ಬರೊಬ್ಬರೊ ಸಹ "ಬಟ್ಟಲಿನ ಆಶೀರ್ವಾದದಲ್ಲಿ" ಮತ್ತು "ರೊಟ್ಟಿಯಲ್ಲಿ" ಪಾಲ್ಗೊಳ್ಳುವವರಾಗಿದ್ದೇವೆ (1 ಕೊರಿಂಥ 10:16). "ರೊಟ್ಟಿಯು ಒಂದೇಯಾಗಿರುವುದರಿಂದ ಅನೇಕರಾಗಿರುವ ನಾವೆಲ್ಲರೂ ಒಂದೇ ದೇಹದಂತಿದ್ದೇವೆ" (1 ಕೊರಿಂಥ 10:17).

- ಸ್ವಪರೀಕ್ಷೆಯಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳುವುದನ್ನು ನಾವು ಆಂತರ್ಯದಲ್ಲಿ ನೋಡಬೇಕು. "ಪ್ರತಿ ಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯನ್ನು ತಕ್ಕೊಂಡು ತನ್ನಲಿ, ಆಪಾತ್ರೆಯಲ್ಲಿ ಕುಡಿಯಲಿ" (1 ಕೊರಿಂಥ 11:28; KJV).

ಈ ಅದ್ಭುತವಾದ ಸ್ಮರಣೆಯನ್ನು ನಾವು ಹೇಗೆ ಸಿದ್ಧಪಡಿಸಬೇಕು? ವಿಷೇಶವಾದ ಸಿದ್ಧತೆಯಂತಿರುವ ಇದಕ್ಕೆ ಸಾಮಾನ್ಯ ಸಿದ್ಧತೆಯು ಅವಷ್ಯವಾದದ್ದಾಗಿದೆ. ಸಾಮಾನ್ಯವಾಗಿ, ಸರ್ವಶಕ್ತಿನಾಗಿರುವವನಿಗೋಸ್ಕರದ ನಮ್ಮೆಲ್ಲ ಆರಾಧನೆಯು ಆಗಿದ್ದು ಕರ್ತನ ಭೋಜನಕ್ಕಾಗಿ ನಾವು ನಮ್ಮ ಹೃದಯವನ್ನೂ ಮತ್ತು ಜೀವಿತವನ್ನು ಸಿದ್ಧಪಡಿಸಿಕೊಳ್ಳಬೇಕು. ಪೌಲನು ಕೊರಿಂಥದವರಿಗೆ "ನೀವು ಕರ್ತನ ಪಾತ್ರೆ ಮತ್ತು ದೆವ್ವಗಳ ಪಾತ್ರೆ ಇವುಗಳೊಳೆಗೆ ಒಂದರಲ್ಲಿಯೇ ಹೂರತು ಎರಡುರಲ್ಲಿಯೂ ಕುಡಿಯಲಾರಿರಿ; ಕರ್ತನ ಪಂಕ್ತಿ ಮತ್ತು ದೆವ್ವಗಳ ಪಂಕ್ತಿ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಊಟಮಾಡಲಾರಿರಿ"[16] ಎಂದಿದ್ದಾನೆ (1 ಕೊರಿಂಥ 10:21). ಶನಿವಾರದಂದು ವಿಗ್ರಹಗಳುಗೆ ಅರ್ಪಿಸಿದ ಮಾಂಸವನ್ನು ಊಟಮಾಡುವದು ಮತ್ತು ಭಾನುವಾರ ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವದು ಅಸಂಬಂಧ ವಾದದ್ದಾಗಿರುವುದು ಆಗಿದೆ. ಅದರಂತೆಂಯೇ, ಕ್ರಿಸ್ತನ ತತ್ವದೊಡನೆ ಸುಸಂಬದ್ಧವಾಗಿರುವ ಜೀವಿತವನ್ನು ಜೀವಿಸುವುದಕ್ಕೆ ನಾವು ನಮ್ಮಿದಾದಷ್ಟು ಉತ್ತಮ ಪ್ರಯತ್ನವನ್ನು ಮಾಡಬೇಕು.

ಪಾಲ್ಗೊಳ್ಳುವುದಕ್ಕಾಗಿ ನಾವು ವಿಷೇಶ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ನಮ್ಮ ಹೃದಯವನ್ನು ಸಿದ್ಧಪಡಿಸಿಕೊಳ್ಳುವುದಕ್ಕಾಗಿ, ನಮ್ಮನ್ನು ನಾವು ಯೋಗ್ಯ ಮನಸ್ಸನ್ನು ಇಡುವುದಕ್ಕಾಗಿ ನಾನು ಸೂಚಿಸುವವನಾಗಿದ್ದೇನೆ. ಪೌಲನು 1 ಕೊರಿಂಥ 11ರಲ್ಲಿ ಏನು ಬರೆದಿದ್ದಾನೆ ಎಂದು ನೆನಪಿಡಿರಿ:

> ಹೀಗಿರುವುದರಿಂದಯಾವನಾದರೂ ಅಯ್ಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೊದ್ರೋಹಮಾಡಿದವನಾಗಿರುವನು. ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯನ್ನು ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕೆಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವುದರಿಂದ ನಾಯ್ಯತೀಪಿಗೊಳಗಗುವನು (ವಚನಗಳು 27-29).

KJVಯಲ್ಲಿ, "*ಅಯೋಗ್ಯವಾಗಿ* ಕರ್ತನ ಈ ರೊಟ್ಟೀಯನ್ನು ತಿಂದು ಈ ಬಟ್ಟಲಲ್ಲಿ ಕುಡಿದವರು ಕರ್ತನ ದೇಹ ಮತ್ತು ರಕ್ತದ ತಪ್ಪಿತಸ್ಥರಾಗಿರುವರು" ಎಂದಿದೆ (ಒತ್ತಿ ಹೇಳಿದ್ದು ನನ್ನದು). ನಾನು ಬಾಲಕನಾಗಿದ್ದಾಗ, ಕರ್ತನ ಭೋಜನದಲ್ಲಿ ಪಾಲ್ಗೊಳ್ಳಲು "ಯೋಗ್ಯತೆಯು" ಅವಶ್ಯಕತೆಯು ಇದೆ ಎಂಬುದಕ್ಕೆ ಆಧಾರವನ್ನು ಮಾಡುವದು ಅವಶ್ಯವಿತ್ತು ಆದರೆ KJV ಯಲ್ಲಿನ ಪದದಲ್ಲಿ "ಯೇಗ್ಯ" ಎಂಬುದಕ್ಕೆ "ಯೋಗ್ಯವಾಗಿ" ಎಂದಿದೆ. ಈ ಆಧಾಕವು ನಮ್ಮ ಗುಣವಲ್ಲ, ಆದರೆ ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ *ಹೇಗೆ ನಾವು ಫೊಲ್ಗೊಳ್ಳಬೇಕು* ಎಂಬುದಾಗಿದೆ. NASBಯಲ್ಲಿ, "ಅಯೋಗ್ಯವಾದ *ನಡವಳಿಕೆ*" ಎಂದಿದೆ. ನಮ್ಮಲ್ಲಿ ಎಲ್ಲರೂ ಅನ್ಯೋನ್ಯ ಭೋಜನದಲ್ಲಿ ಪಾಲ್ಗೊಳ್ಳಲು ಅಯೋಗ್ಯವಾಗಿದ್ದೇವೆ, ಆದರೆ ನಾವೆಲ್ಲರೂ ಕರ್ತನ ಭೋಜನವು ಏನನ್ನು ಪ್ರತಿನಿಧಿಸುತ್ತದೋ ಅದರ ಮೇಲೆ ಯೋಗ್ಯ ರೀತಿಯಿಂದ

ಗಮನವಿಡುವುದರ ಮೂಲಕ ನಾವೆಲ್ಲರೂ ಪಾಲ್ಗೊಳ್ಳುವವರಾಗಬೇಕು.

ಹೆಚ್ಚಾದ ಕ್ರೈಸ್ತರು ಅನ್ಯೋನ್ಯ ಭೋಜನದ ಆರಂಭದಲ್ಲಿ ಕ್ರಿಸ್ತನು ಮಾಡಿದ ತ್ಯಾಗದಲ್ಲಿ ತಮ್ಮ ಮನಸ್ಸನ್ನು ಕೇಂದ್ರೀಕರಿಸುವಲ್ಲಿ ತಮ್ಮದೇ ಆದ ಸ್ವಮಾರ್ಗವನ್ನು ಬೆಳೆಸಿಕೊಂಡಿರುತ್ತಾರೆ. ನಾವು ಈಗಾಗಲೇ ನಾವು ತೆಗೆದುಕೊಳ್ಳಬಹುದಾದ ಐದು ದೃಷ್ಟಿಕೋನಗಳನ್ನು ಸೂಚಿಸಿದ್ದಾಗಿದೆ. ಇತರ ಕೆಲ ವಿಚಾರಗಳು ಇಲ್ಲಿವೆ. ಕೆಲವರು ಶಿಲುಬೆಯನ್ನು ಅವರ ಮನದಲ್ಲಿ ಚಿತ್ರಿಸಿಕೊಂಡಿರುತ್ತಾರೆ ಮತ್ತು ಮಾನಸಿಕವಾಗಿ ಕ್ರಿಸ್ತನ ನೋವನ್ನು ಪುನಶ್ಚೇತನ ಗೊಳಿಸಿಕೊಂಡಿರುತ್ತಾರೆ. ಕೆಲವರು ತಮಗೆ ಯಾವ ಅರ್ಥಕೊಡಬೇಕೋ[17] ಮತ್ತು ತಾವು ಏನನ್ನು ಪ್ರೀತಿಸುತ್ತಾರೋ ಅವುಗಳ ಮೇಲೆ ಕ್ರೂಜೆಯ ಮಹತ್ವವನ್ನು ಗಮನಹರಿಸುತ್ತಾರೆ. ಕೆಲವರು ಕ್ರಿಸ್ತನ ಮರಣ ಹೂಣುವಿಕೆ ಮತ್ತು ಪುನರುತ್ಥಾನದ ಪರೀಚ್ಛೇ ದದಿಂದ ಬೈಬಲನ್ನು ಓದುತ್ತಾರೆ. ಕೆಲವರು ಕರ್ತನು ನಮಗೆ ಮಾಡಿದ್ದನ್ನು ವ್ಯಕ್ತಪಡಿಸುವ ಶ್ರೇಷ್ಠ ಗೀತಗಳ ಪದಗಳನ್ನು ಓದುತ್ತಾರೆ. ಪ್ರತಿಯೊಬ್ಬರೂ ಸ್ವಲ್ಪ ಭಿನ್ನವಾಗಿ ಕಾಣುವಂತೆ ಅಲ್ಪವಾದ ಸಮಾನತೆಯನ್ನು ಹೊಂದಿರುತ್ತಾರೆ.[18] ಏನೇ ಅರ್ಥಕೊಡಲಿ ಅನ್ಯೋನ್ಯ ಭೋಜನ ಆರಂಭದಲ್ಲಿ ನಾವು ನಮ್ಮ ಮನಸ್ಸನ್ನು ಕೇಂದ್ರೀಕರಿಸುವವರಾಗಿರುತ್ತೇವೆ, ನಾವು ನಮ್ಮ ಸಮಯವನ್ನು ಕರ್ತನ ತ್ಯಾಗದೆಡೆಗೆ ಕೇಂದ್ರಿಕರಿಸುವಂತ ವಿಚಾರದಲ್ಲಿ ತೊಡಗಿಕೊಂಡಿರುತ್ತೇವೆ.

**ಕರ್ತನ ಭೋಜನ.**

**ಐಚ್ಛಿಕವಾದದ್ದು: ಕೊಡುಗೆಯ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯ ಕಾಣಿಕೆ.**

**ಕಾಣಿಕೆ.**

**ಕೊನೆಯ ಟಿಪ್ಪಣಿ ಮತ್ತು ಆಮಂತ್ರಣ:**

ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವಿಕೆಯ ಪ್ರತಿಸಮಯವೂ ಬಹು ಮಹತ್ವದ್ದಾಗಿದೆ. ಅನ್ಯೋನ್ಯ ಭೋಜನವನ್ನು ತಪ್ಪಿಸಿಕೂಳ್ಳುವುದನ್ನು ನಾವು ಆರಿಸಿಕೊಂಡಾಗ ...

- ಕ್ರಿಸ್ತನ ಆಜ್ಞೆಯನ್ನು ನಾವು ಅಲಕ್ಷಿಸುವವರಾಗಿರುತ್ತೇವೆ. “ನೀವು ನನ್ನ ಆಜ್ಞೆಯನ್ನು ಕೈಕೊಂಡು ಅದರಂತೆ ನಡೆಯಬೇಕು” ಎಂದು ಯೇಸು ಹೇಳಿದನು (ಯೋಹಾನ 14:15; ನೋಡಿರಿ ಯೋಹಾನ 15:14).
- ಕರ್ತನನ್ನು ನೆನಪಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳುತ್ತೇವೆ, “... ಇದನ್ನು ಮಾಡುವಾಗಲೆಲ್ಲ ನನ್ನನ್ನು ನೆನಪಿಸಿಕೊಳ್ಳಿರಿ” ಎಂದು ಆತನು ಹೇಳಿದನು (1 ಕೊರಿಂಥ 11:24).
- ಆತನ ಮರಣವನ್ನು ಸಾರಿಹೇಳುವ ಅವಕಾಶವನ್ನು ನಾವು ಅಲಕ್ಷಿಸುತ್ತೇವೆ. ನಾವು ರೊಟ್ಟಿಯನ್ನು ತಿನ್ನವಾಗಲೆಲ್ಲ ಮತ್ತು ಪಾತ್ರೆಯಲ್ಲಿ ಕುಡಿಯುವಾಗಲೆಲ್ಲ ಆತನ ಮರಣವನ್ನು ಸಾರಿಹೇಳಬೇಕು ಎಂದು ಹೇಳುತ್ತಾನೆ (1 ಕೊರಿಂಥ 11:26).
- ಯೇಸುವಿನ ರಕ್ತ ಎಂದರೆ ನಮಗೆ ಅಲ್ಪವಾದದ್ದು ಎಂದು ನಾವು ಸೂಚಿಸುವವ ರಾಗಿದ್ದೇವೆ. ನಮ್ಮನ್ನು ನಾವು “ತನ್ನ ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧ ವೆಂದೆಣಿಸಿ” ದಂಥ ಮನುಷ್ಯನ ಜೊತೆಯಲ್ಲಿ ಇಟ್ಟುಕೊಳ್ಳುತ್ತೇವೆ (ಇಬ್ರಿಯ 10:29).
- ನಾವು ಇತರರಿಗೆ ವಿಶೇಶವಾಗಿ ಹೊಸದಾಗಿ ನಂಬಿಕೆಯಲ್ಲಿರುವವರಿಗೆ ಕೆಟ್ಟ ಉದಾಹರಣೆಯಾಗಿದ್ದೇವೆ. ನಾವು ಒಬ್ಬ ವಿಶ್ವಾಸಿಯು ಎಡುವುದಕ್ಕೆ ಕಾರಣವಾ ದರೆ ಆತನ ಕುತ್ತಿಗೆಗೆ ಬೀಸುವ ಕಲ್ಲನ್ನು ಕಟ್ಟಿ ಸಮುದ್ರದ ಆಳಕ್ಕೆ ಹಾಕುವದು ಯುಕ್ತವೆಂದು ಕ್ರಿಸ್ತನು ಹೇಳಿದನು (ಮತ್ತಾಯ 18:6).
- ನಮ್ಮ ಧರ್ಮವು ಮನವರಿಕೆಗಿಂತಲೂ ಸೌಕರ್ಯಯುತವಾದದ್ದು ಆಗಿದೆ ಎಂದು

ನಾವು ಇತರರಿಗೆ ಪ್ರಕಟಿಸುವವರಾಗಿದ್ದೇವೆ. ಮೊದಲ ಸಂಗತಿಯನ್ನು ಮೊದಲು ಇಡಬೇಕು ಎಂದು ನಾವು ಕಲಿತಂಥ ನಮ್ಮ ಪ್ರಾಧಾನ್ಯತೆಗಳು ತಪ್ಪು ಎಂದು ನಾವು ಪ್ರಾಯೋಗಿಸುವವರಗಿದ್ದೇವೆ (ಮತ್ತಾಯ 6:33).

ನಾವು ಸಂತರೋಡನೆ ಆರಾಧನೆಮಾಡುವುದನ್ನು ನಾವು ಅಲಕ್ಷಿಸಿದಾಗ ಮತ್ತು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವುದರಲ್ಲಿ ವಿಫಲರಾದಾಗ, ಈ ಸರಿಯಾದದ್ದನ್ನು ನಮ್ಮ ಸಹೋದರ ಮತ್ತು ಸಹೋದರಿಯರೊಂದಿಗೆ ಮತ್ತು ದೇವರ ಜೊತೆಯಲ್ಲಿ ಮಾಡುವದು ನಮಗೆ ಅವಶ್ಯವಿದೆ (ಇಬ್ರೀಯ 10:25, 26; ಯಾಕೋಬ 5:16).

ನೀವು ಕ್ರೈಸ್ತರಾಗಿದ್ದೇ ಆದರೆ, "ನಾನು ಕರ್ತನಭೋಜನದಲ್ಲಿ ಪಾಲ್ಗೊಳ್ಳಲು ಅಸಂಗತನೇ?" ನಿಮ್ಮನ್ನು ನೀವು ಕೇಳಿಕೊಳ್ಳಿ. ಹಾಗಿದ್ದದೇ ಆದರೆ ಅದನ್ನು ತಪ್ಪು ಎಂದು ಒಪ್ಪಿಕೊ, ಇತರ ಕ್ರೆಸ್ತರ ಪ್ರಾರ್ಥನೆಗಾಗಿ ಕೇಳಿಕೊ, ಮತ್ತು ಕ್ಷಮಾಪಣೆಗಾಗಿ ದೇವರಲ್ಲಿ ಮೊರೆಯಿಡು (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9). ನೀವು ಕ್ರೈಸ್ತರಲ್ಲದ ಹೋದರೆ, ಕ್ರಿಸ್ತನು ನಿಮಗೆ ಕೊಟ್ಟ ಎಲ್ಲವೂ ಅಂದರೆ ವಾರವೂ ಆತನೊಡನೆಯ ಸಹ ಭೋಜನದಿಂದ ಬರುಬಲವನ್ನು ಒಳಗೊಂಡು ಎಲ್ಲವೂ ನಿಮಗೆ ಅವಶ್ಯವಿದೆ. ನೀವು ಆತನಲ್ಲಿ ನಂಬುವ ಮೂಲಕ ಮತ್ತು ಜೀವಿತವನ್ನು ಬದಲಾವಣೆ ಮಾಡಿಕೊಳ್ಳುವ ಮೂಲಕ ದಿಕ್ಷಾಸ್ನಾನ ಹೊಂದಬೇಕು (ನೀರಲ್ಲಿ ಮುಳುಗಬೇಕು) ಎಂದು ನಾನು ನಿಮ್ಮ ಒತ್ತಾಯಿಸುತ್ತೇನೆ (ಗಲಾತ್ಯ 3:26, 27; ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38). ನೀವು ಕರ್ತನಿಗೆ ಯಾವುದೇ ರೀತಿಯಿಂದ ಪ್ರತಿಕ್ರಯಿಸಲು ಬಯಸಿದರೆ ಅದನ್ನು ಮಾಡಲು *ಈಗಲೇ* ಇದೇ ಸಮಯ.

**ಆಮಂತ್ರಣದ ಹಾಡು.**
**ಮುಕ್ತಾಯದ ಹಾಡು.**
**ಮುಕ್ತಾಯದ ಪ್ರಾರ್ಥನೆ.**

## ಮಾಹಿತಿ

ಇಂಥ ಆರಾಧನೆಗಳಲ್ಲಿ ಹಾಡುಗಳು, ಪ್ರಾರ್ಥನೆಗಳು, ವೇದಭಾಗದ ಓದುವಿಕೆಗಳು ಮತ್ತು ಟಿಪ್ಪಣೆಗಳೂ ಕೇವಲ ಸೂಚಿಸಲ್ಪಟ್ಟವು ಆಗಿವೆ; ನೀವು ಆರಾಧನೆಗೆ ಹೊಂದಿಕೆಯಾಗುವಂತೆ ಇವನ್ನು ತೆಗೆದುಕೊಳ್ಳಿರಿ. ಆರಾಧನೆಯ ಪ್ರಾರಂಭದಲ್ಲಿನ ಹಾಡುಗಳು ಶಿಲುಬೆಯ ಅಥವಾ ಕರ್ತನ ಭೋಜನದ ಕೇಂದ್ರೀಕೃತವಾಗಿರಬೇಕು. ಸಹಭೋಜನವನ್ನು ಕೊಡವ ಮುನ್ನ ಪ್ರಾರ್ಥನೆಯನ್ನು ನಡೆಸುವವರು ರೊಟ್ಟಿ ಮತ್ತು ದ್ರಾಕ್ಷಾರಸದ ಬಗ್ಗೆ ತಮ್ಮ ಸ್ವಂತ ವಿಚಾರವನ್ನು ಸೇರಿಸಬಹುದು.

---
ಟಿಪ್ಪಣಿಗಳು

[1]10th and Francis church of Christ, Oklahoma City, c. 1956–60. "ನಾನು ಅಲ್ಲಿದ್ದೇನು" ಎಂಬ ವಾರಪತ್ರಿಕೆಯಿಂದ ಪಡೆದುಕೊಳ್ಳಲಾಗಿದೆ. [2]ಇಲ್ಲಿ ಬಳಸಲಾದ ಒಂದು ಪ್ರಸಂಗದ ಆಧಾರವಾಗಿದೆ ಅದು George W. DeHoff, *Gospel Sermons* (Murfreesboro, Tenn.: DeHoff Publications, 1953), 168–82. [3]ನನ್ನ ಕೇಳುಗರಿಗೆ ಚಿರಪರಿಚಿತವಾದ ಸ್ಮಾರಕಗಳನ್ನು ನಾನು ಬಳಸಿದ್ದೇನೆ. ಇದನ್ನು ನೀವಿರುವೆ ಡೆಗೆ ತಕ್ಕಹಾಗೆ ಬಳಸಿಕೊಳ್ಳಿರಿ. [4]US ನಲ್ಲಿ ನಾವು ಈಸ್ಟನಲ್ಲಿರುವ ಸಾಲ್ಟೈನ್ ಕ್ರಾಕರ್ಸಗಳಿರುವ ಪೆಟ್ಟಿಗೆ ಚೌಕ, ಅಯತ ಕೊಳ್ಳುತ್ತೇವೆ ಇದನ್ನು ಮತ್ತು ಮುಂದಿನ ಸಂಗತಿಯನ್ನೂ ("ಪ್ರೆಂಚ ಬ್ರೆಡ್") ನೀವಿರುವೆಡೆಗೆ ತಕ್ಕ ಹಾಗೆ ಹೊಂದಿಸಿಕೊಳ್ಳಿರಿ. [5]ಉದ್ದವಾದ, ಸಣ್ಣದಾದ ಬ್ರೆಡ್

ತುಂಡುಗಳನ್ನು ನಮ್ಮ ಭಾಗದಲ್ಲಿ ನಾವು ಇದನ್ನು "ಪ್ರೆಂಚ ಬ್ರೆಡ್" ಕರೆಯುತ್ತಾರೆ. [6]ಹುಳಿಹಿಟ್ಟು ಒಂದು ಸಾಧನವಾಗಿದ್ದು, ಈಸ್ಟನಂತೆ ಅಥವಾ ಟಾಟರ ಕ್ರೀಮನಂತೆ ಇದ್ದು ಇದರ ಕಾರಣದಿಂದ ಹಿಟ್ಟು ಹುದುಗುವಿಕೆಯ ಸಂಧರ್ಭದಲ್ಲಿ ಉಬ್ಬಿಬರುವದು. [7]ನೀವು ಬಳಸುವ ಹುಳಿಯಿಲ್ಲದ ಹಿಟ್ಟಿನ ಬಗೆಗಿನ ಚಿತ್ರಗಳನ್ನೂ ಕೂಡಾ ನಾವು ಬಳಸವುದನ್ನೂ ನೀವು ಸೇರಿಸಬಹುದು. ಕೆಲ ಕ್ರೈಸ್ತರು ಇದನ್ನು ತಮ್ಮಷ್ಟಕ್ಕೆ ತಾವೇ ಮಾಡುತ್ತಾರೆ. US ನಲ್ಲಿ ಅನೇಕ ಸಭೆಯವರು ಪಸ್ಕದ ಊಟದಲ್ಲಿ ಬಳಸುವಂತಹ ಪ್ಯಾಕಾದ ಪೆಟ್ಟಿಗೆಗಳನ್ನು. ಹುಳಿಯಿಲ್ಲದ ಹಿಟ್ಟಿನ ವೆಫರ್ಸಗಳನ್ನು ಬಳಸುತ್ತಾರೆ. [8]ದ್ರಾಕ್ಷೆ ರಸ ತಾಜಾ ದ್ರಾಕ್ಷೆಯು ಕೊಳ್ಳದ ಸ್ಥಳದಲ್ಲಿ ಜೀವಿಸುವವರು ಸಾಮಾನ್ಯವಾಗಿ ಒಣದ್ರಾಕ್ಷೆಯನ್ನು ಕೊಳ್ಳುತ್ತಾರೆ ಮತ್ತು ಅದನ್ನು ನೀರಿನಲ್ಲಿ ನೆನಿಸಿ ಒಂದು ತರದ ಮರುಸಂಘಟಿತವದ ದ್ರಾಕ್ಷೆರಸವನ್ನು ಅವರು ಪಡೆಯುತ್ತಾರೆ. [9]ಕೇವಲ ಕೆಂಪು ದ್ರಾಕ್ಷಾರಸವು ಮಾತ್ರ ಬಳಸಲ್ಪಡುತ್ತಿತ್ತು ಎಂದು ಹೇಳಲಾಗದು. ಯಾವುದೇ ಬಣ್ಣದ ರಸವುಅಲ್ಲಿ ಸಿಗುವುದಾಗಿತ್ತು, ಆದರೆ ಅನೇಕರು ಕೆಂಪುಮಯ ದ್ರವ್ಯವನ್ನು ಬಳಸಲು ಸೂಚಿಸುವವರಾಗಿರುತ್ತಾರೆ. US ನಲ್ಲಿ ದ್ರಾಕ್ಷಾರಸವು ದ್ರಾಕ್ಷೆಯಿಂದ ಮಾಡಲ್ಪಟ್ಟಿದ್ದು ಬಲು ಜನಪ್ರಿಯವಾಗಿದೆ. [10]ಈ ರೂಪಕದ ಅನೇಕ ಉದಾರಣೆಗಳು ಹೊಸ ಒಡಂಬಡಿಕೆಯಲ್ಲಿ ಸಿಕ್ಕುವವು ಆಗಿದೆ (ನೋಡಿರಿ ಲೂಕ 8:11; 1 ಕೊರಿಂಥ 10:4).

[11]"ಅನ್ಯೋನ್ಯ ಭೋಜನ" ಎಂಬುದರ ಗ್ರೀಕಭಾಷಂತರದ KJV ಅರ್ಥವು "ಹುದುವಾಗಿ ಕೂಡಿಬರುವದು" ಎಂದಿಗೆ. ಆದ್ದರಿಂದ NASB ಯು ಆ ಪದವನ್ನು 1 ಕೊರಿಂಥ 10:16 ರಲ್ಲಿಯ ಹಾಗೆ "ಹಂಚಿಕೊಳ್ಳುವದು" ಎಂದು ಭಾಷಂತರಿಸಿದೆ. [12]KJVಯಲ್ಲಿ ಕೇವಲ "ವಾರದ ಮೊದಲನೆಯ ದಿನ" ಎಂದು ಮಾತ್ರವಿದೆ; ಆದರೆ ಪ್ರತಿವಾರವೂ ಮೊದಲ ದಿನ ಇದ್ದುದರಿಂದ ಅಲ್ಲಿನ ಸೂಚನೆಯು ಪ್ರತಿ ಮೊದಲ ದಿನ ಎಂದಾಗಿದೆ. ಹಳೇಯ ಒಡಂಬಡಿಕೆಗಾಗಿ ಸಮಾನವಾದ ವಿಮೋಚನಕಾಂಡ 20:8 ನ್ನು ನೋಡಿರಿ. "ಸಬ್ಬತ ದಿನವನ್ನು ಆಚರಿಸಿರಿ" ಎಂದರೆ ವಾರದ ಪ್ರತಿ ಮೊದಲನೆಯ ದಿನವು ಪವಿತ್ರವಾದದ್ದು ಎಂದಾಗಿದೆ. [13]ಈ ಲೇಖಕರಲ್ಲಿ ಒಬ್ಬನು Justin Martyr (*Apology* 1.67) ಆಗಿದ್ದನು. [14]John Laurence Mosheim, *An Ecclesiastical History, Ancient and Modern,* trans. Archibald Maclaine, vol. 1 (New York: Harper & Brothers, 1871), 303. [15]ಈ ಸಂಧರ್ಭದಲ್ಲಿ "ಹೇಗೆ" ಎನ್ನುವುದಕ್ಕಿಂತ "ಯಾರು" ಎಂಬುದನ್ನು ಪರಿಚ್ಛೇದವು ಸೂಚಿಸುವುದಾಗಿದೆ, ಆದರೆ ವಿಸ್ತೃತವಾದ ಅನ್ವಯವೂ ಕೂಡಾ ಮಾಡಲ್ಪಡಬಹುದು. [16]"ದೆವ್ವದ ಬಟ್ಟಲು" ಮತ್ತು "ದೆವ್ವದ ಮೇಜು" ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರವನ್ನು ಸೂಚಿಸುವುದಾಗಿದೆ. [17]ಕರ್ತನ ಭೋಜನವು ಸಂಗತಿಗಳನ್ನು ಯೋಗ್ಯವಾದ ಸ್ಥಳದಲ್ಲಿ ಇಡುವುದಾಗಿದೆ. ನಾನು ಸಣ್ಣ ಸಮಸ್ಯೆಗಳ ಬಗ್ಗೆ ಒತ್ತಲ್ಪಡುತ್ತೇನೆ ಆದರೆ ನಿಜವಾಗಿಯೂ ಯಾವುದು ಮಹತ್ವದ್ದು ಎಂಬುದನ್ನು ಅನ್ಯೋನ್ಯಭೋಜನವು ನನಗೆ ನೆನಪಿಸುವುದಾಗಿದೆ. [18]ಅನ್ಯೋನ್ಯ ಭೋಜನವು ನಡೆಯುತ್ತಿರುವಾಗ ಅಥವಾ ಅದಕ್ಕೆ ಯೋಗ್ಯವಾದ ವೇದಭಾಗವು ಓದಲ್ಪಡುತ್ತಿರುವಾಗ ನಾವು ಕ್ರೂಜೆಯ ಬಗೆಗಿನ ಹಾಡುಗಳನ್ನು ಹಾಡುತ್ತೇವೆ ಎಂದು ಕೆಲವರು ಸೂಚಿಸುವವರಾಗಿದ್ದಾರೆ. ಇಂತಹ ಚಟುವಟಿಕೆಗಳು ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವ ಅಂಶದಲ್ಲಿ ಗಮನಹರಿಸಲು ಸಹಾಯಿಸುತ್ತವೆ ಆದರೆ ಇತರರನ್ನು ಬೇರೆಡೆಗೆ ಸೆಳೆಯುವವು ಆಗಿರುತ್ತವೆ. ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವಿಕೆಯಂತಹ ವೈಯಕ್ತಿಕ ಸಂಗತಿಗಳು ಕರ್ತನೊಡನೆ ವೈಯಕ್ತಿವಾದವು ಆಗಿದ್ದು ಇದು ಹೇಗೆ ಮಾಡಲ್ಪಡಬೇಕೆಂದು ಯಾರೊಬ್ಬನೂ ಇನ್ನೊಬ್ಬನಿಗೆ ನಿರ್ದೇಶಿಸಲಾರನು. ಸಹ ಭೋಜನವು ಶಾಂತಿವಾತವರಣದಲ್ಲಿ ನಡೆಯಲ್ಪಡುತ್ತಿದ್ದು ಪ್ರತಿಯೊಬ್ಬನೂ ಆತನ ಅಥವಾ ಅವಳ ರೀತಿಯಲ್ಲಿಯೇ ಕರ್ತನೋಡನೆ ಸಹಭೋಜದಲ್ಲಿ ಇರುವುದಕ್ಕೆ ಪೂರಕವಾಗಿರುತ್ತದೆ ಎದಾಗಿದೆ.

# ಯೋಹಾನ 14-17ರ ಮೇಲಿನ ಕೆಲ ವಿಶ್ಲೇಷಣೆಗಳು

**14:1:** ಈ ವಚನದಲ್ಲಿನ "ನಂಬುವದು" ಎಂಬ ಗ್ರೀಪದ ಭಾಷಾಂತರವು ನಿರ್ದೇಶಕತ್ವದ ಅಥವಾ ವಿಧ್ಯರ್ಥಕದ ಗುಣ ಇರುವುದಾಗಿದೆ. ಈ ಪರಿಚ್ಛೇದವು "ನೀವು ದೇವರನ್ನೂ ನಂಬಿರಿ (ನಿರ್ಧೇಶಕ) ಎಂದು ಅಥವಾ "ದೇವರನ್ನು ನಂಬಿರಿ; ನನ್ನಲ್ಲಿಯೂ ನಂಬಿಕೆಯಿಡಿರಿ" (ವಿಧ್ಯರ್ಥಕ) ಭಾಷಂತರವಾಗಬಹುದಿತ್ತು.

**14:2:** "ಸ್ಥಳ ಸಿದ್ಧಮಾಡುವದು" (NASB), "ಬಿಡಾರಗಳು" (KJV), ಮತ್ತು "ಕೋಣೆಗಳು" (NIV) ಇದರ ಗ್ರೀಕ್‌ಪದ ಭಾಷಂತರವು ವಾಸಿಸುವ ಸ್ಥಳಗಳನ್ನು ಸೂಚಿಸುವವು ಆಗಿವೆ. 14:23ರಲ್ಲಿ "ವಾಸಸ್ಥಾನ" (NASB, KJV). ಎಂದು ಭಾಷಂತರವಾಗಿದೆ. ಈ ಪದವು ಪರಲೋಕದಲ್ಲಿಯೆ ಶಾಶ್ವತ ವ್ಯವಸ್ಥೆಯನ್ನು ಒತ್ತಿಹೇಳುವುದಾಗಿದೆ. (ಪರಲೋಕವು ಒಂದು ಗುಡಾರವಲ್ಲ ಅದು ಶಾಶ್ವತವಾದ ವಾಸಸ್ಥಾನ ಆಗಿದೆ.) ವಾಸ್ತವವಾಗಿ ಅಲ್ಲಿ "ಅನೇಕ ಬಿಡಾರಗಳು ಇವೆ" ಎಂಬುದು ದೇವರ ಶಾಶ್ವತ ವ್ಯವಸ್ಥೆಯ ವಿತಿಯಿಲ್ಲದಿರುವಿಕೆಯನ್ನು ಸೂಚಿಸುವುದಾಗಿದೆ.

**14:8:** ವಿಮೋಚನಕಾಂಡ 33:20ರಲ್ಲಿನ "ನೀನು ನನ್ನ ಮುಖವನ್ನು ನೋಡಲಿಕ್ಕಾದು, ಮನುಷ್ಯರಲ್ಲಿ ಯಾವನೂ ನನ್ನನ್ನು ನೋಡಿ ಜೀವಿಸಲಾರನೂ" ಎಂಬ ದೇವರ ಮಾತುಗಳು ಬಹುಶಃ ಪಿಲಿಪ್ಪನ ಮನದಲ್ಲಿ ಇರಬಹುದು.

**14:9:** ಯೇಸು "ದೇವರೆಡೆಗೆ ಮುಖವನ್ನು ಮಾಡಿದನು" ಎಂದು ಹೇಳಲ್ಪಟ್ಟಿದೆ. ಯೇಸುವಿನ ಬಗ್ಗೆ ಹೆಚ್ಚಾಗಿ ಕಲಿತಂತೆಯೇ ನಾವು ದೇವರ ಗುಣಗಳ ಬಗ್ಗೆ ಬಹುವಾಗಿ ಕಲಿಯುತ್ತೇವೆ.

**14:22:** "ಯೂದನು (ಈತನು ಈಸ್ಕರಿಯೋತನಲ್ಲ)" "ಯೊಕೋಬನ ಮಗನಾದ ಯೂದನು" ಮತ್ತು "ತದ್ದಾಯನು" ಎಂದು ಗುರುತಿಸಲ್ಪಟ್ಟಿದ್ದಾನೆ. ಮೆಸ್ಸೀಯನು ರಾಜಕೀಯ ರಾಜ್ಯವನ್ನು ಭೌತಿಕವಾಗಿ ಇಹಲೋಕದಲ್ಲಿ ಆಳುವನು ಎಂದು ದೇವರ ರಾಜ್ಯದ ಬಗೆಗೆ ಈತನಿಗಿರುವ ತಪ್ಪು ಕಲ್ಪನೆಯಿಂದಾಗಿ ಈಯೂದನು ಗಲಿಬಿಲಿಗೊಳಗಾದನು. ಇದು ಹಾಗಿರುವಾಗ, ಯೇಸು ತನ್ನನ್ನು ತಾನು ಈ ಲೋಕಕ್ಕೆ ಪ್ರಕಟಿಸಿಕೊಳ್ಳಲು ಯಾಕೆ ಬಯಸಲಿಲ್ಲ?

**14:26; 16:13:** ಈ ಎರಡು ವಚನಗಳು ಸಮಸ್ತ ಹೊಸ ಒಡಂಬಡಿಕೆಯ ಪ್ರೇರಣೆಯ ಮೇಲೆ ಇರುವುದಾಗಿದೆ:ಆತ್ಮನು ಯೇಸು ಹೇಳಿದ್ದೆಲ್ಲವನ್ನೂ ಅಪೊಸ್ತಲರ ಮನದಲ್ಲಿ ಇರಿಸಿದನು (ಸುವಾರ್ತೆಯ ವಿವರಣೆಗಳು), ಆತ್ಮನು ಎಲ್ಲ ಸಂಗತಿಗಳನ್ನು ಅಪೊಸ್ತಲರಿಗೆ ಬೋದಿಸಿದನು ಅಪೊಸ್ತಲರ ಕೃತ್ಯಗಳು ಮತ್ತು ಪತ್ರಿಕೆಗಳ, ಮತ್ತು ಅದರಿಂದ ಹೊರಬಂದದ್ದನ್ನು ಆತನು ಪ್ರಕಟಿಸಿದನು (ಪ್ರಕಟಣೆ ಪುಸ್ತಕ).

**14:28:** "ತಂದೆಯು ನನಗಿಂತ ದೊಡ್ಡವನು" ... "ಎಂದು ಯೇಸು ಹೇಳುವಾಗ, ಆತನು ತನ್ನ ಸ್ವಂತ ದಿವ್ಯತೆಯನ್ನು ನಿರಾಕರಿಸುತ್ತಿಲ್ಲ ಅಥವಾ ತನ್ನನ್ನು ತಾನು ತಂದೆಯೊಡೆನೆ ಸರಿಗಟ್ಟಿಕೊಳ್ಳುತ್ತಿಲ್ಲ (ನೋಡಿರಿ ಯೋಹಾನ 10:30). ಬದಲಾಗಿ, ಆತನು ತನ್ನ ಭೂಲೋಕದ ಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದಾನೆ; ಆತನು ಮನಕುಲಕ್ಕೆ ಬರುವುದಕ್ಕಾಗಿ ಆತನು ತನ್ನ ವಿಷೇಶ ಅಧಿಕಾರವನ್ನು ಬಿಟ್ಟು ಕೊಟ್ಟನು (ಫಿಲಿಪ್ಪಿ 2:6-8).ಆತನು ತನ್ನ ತಂದೆಯ ಬಳಿಗೆ ಏರಿಹೋದಾಗ ಜಾಗತಿಕ ಮಿತಿಗಳಿಂದ ಆತನು ಬಿಡುಗಡೆ ಹೊಂದುತ್ತಾನೆ ಮತ್ತು ತನ್ನ

ಹಿಂದಿನ ಮಹಿಮೆಯನ್ನು ತಿರುಗಿ ಪಡೆಯುತ್ತಾನೆ (ಯೋಹಾನ 17:5; ಫಿಲಿಪ್ಪಿ 2:9-11).

**14:30; 16:11:** "ಈ ಜಗತ್ತಿನ ಒಡೆಯನು ಸೈತಾನನು" ಆಗಿದ್ದಾನೆ. ಕ್ರಿಸ್ತನು ಕ್ರೂಜೆಯ ಮೇಲಿನ ಯುದ್ಧದಲ್ಲಿ ಸೈತಾನನ ಮೇಲೆ ವಿಜಯವನ್ನು ಸಾಧಿಸಿದನು (ನೋಡಿರಿ ಯೋಹಾನ 12:31, 32; ಇಬ್ರೀಯ 2:14). ಸೈತಾನನು ನಮ್ಮ ಪಾಪಗಳ ಬಗ್ಗೆ ಆರೋಪಿಸಿ ನಮ್ಮ ಮೇಲಿನ ಯುದ್ಧದಲ್ಲಿ ಜಯಗಳಿಸಬಹುದು, ಆದರೆ ಯೇಸು ಪಾಪವಿಲ್ಲದವನಾಗಿದ್ದಾನೆ (ಇಬ್ರಿಯ 4:15) ಕ್ರಿಸ್ತನು ನಂಬಿಗಸ್ತನಾಗಿ "ಆತನು [ಸೈತಾನನು] ನನಗೇನೋ ಮಾಡನು"[1] ಎಂದು ಹೇಳಿದನು ಈ ಜಗತ್ತಿನ ಒಡೆಯನು "ಕ್ರಿಸ್ತನ ಮೇಲೆ ಅಧಿಕಾರವನ್ನು ಸಾಧಿಸುವಕ್ಕೆ ಹಕ್ಕಾಗಲೀ ಅಥವಾ ಕಾರಣವಾಗಲಿ ಯಾವುದನ್ನೂ ಕ್ರಿಸ್ತನಲ್ಲಿ ಏನನ್ನೂ ಕಾಣಲಿಲ್ಲ."[2]

**15:1:** ಯೇಸು "ನಿಜವಾದ ದ್ರಾಕ್ಷಾಬಳ್ಳಿ" ಆಗಿದ್ದು ಇತರ ಎಲ್ಲ ದ್ರಾಕ್ಷೆಯು ಮೂಲದ ನಕಲುಗಳು ಆಗಿವೆ.[3] ಹಳೇಯ ಒಡಂಬಡಿಕೆಯಲ್ಲಿ, ದ್ರಾಕ್ಷೆಯು ಇಸ್ರಾಯೇಲರಿಗೆ ಚಿನ್ಹೆಯಾಗಿತ್ತು (ಕೀರ್ತನ 80:8; ಯೇಶಾಯ 5:1-7; ಯೆರಮೀಯ 2:20, 21; ಯೆಹೆಜ್ಕೇಲ 15:1-8; 19:10-14; ಹೋಶೆಯ 10:1).

**15:2:** ದೇವರ "ಕಡಿದು ಹಾಕುವಿಕೆ" ಕಾರ್ಯವು ಆತನ ಪ್ರೀತಿಯಮಕ್ಕಳಿಗೆ ಆತನ ಶಿಸ್ತಿನ ಬಗ್ಗೆ ಮಾತನಾಡುವ ಇನ್ನೊಂದು ಮಾರ್ಗವಾಗಿದೆ (ನೋಡಿರಿ ಇಬ್ರೀಯ 12:4-13).

**15:15:** ನಿಯಮದ ಪ್ರಕಾರ, ಗುಲಾಮರಿಗೆ ಯಾವುದೇ ವಿವರಣೆಯಿಲ್ಲದೆ ಕೆಲಸವು ನೇಮಿಸಲ್ಪಡುತ್ತದೆ. ಈ ಸಂಧರ್ಭದಲ್ಲಿ, ಸ್ನೇಹಿತರು ಯಾವುದೇ ಕಾರ್ಯವನ್ನು ಮಾಡಲು ಕೇಳಿದಾಗ, ಅವರು ಸಾಮಾನ್ಯವಾಗಿ ಯಾಕೆ ಎಂದು ಕೇಳಲ್ಪಡುತ್ತಾರೆ. ಯೇಸು ಅಪೋಸ್ತಲರನ್ನು ಸ್ನೇಹಿತರು ಎಂದು ಕರೆದನು ಯಾಕೆಂದರೆ ಆತನು ದೇವರ ಪ್ರಕಟಣೆಯನ್ನು ಹಂಚಿದನು.

**15:20:** ಆಧಾರವು ಇದಕ್ಕೆ ಯೋಹಾನ 13:16.

**15:22, 24:** ಆತನು ಬಂದಾಗ ಯೆಹೋದಿಗಳು ಪಾಪವಿಲ್ಲದವರಾಗಿದ್ದರು ಎಂದು ಯೇಸು ಹೇಳಲಿಲ್ಲ. ನಾವೆಲ್ಲರೂ ಪಾಪಮಾಡಿದ್ದೇವೆ (ರೋಮ 3:23), ಮತ್ತು ಅಲಕ್ಷತೆಯು ಪಾಪಕ್ಕಿರುವ ನೆವವಲ್ಲ (ಅಪೋಸ್ತಲರ ಕೃತ್ಯಗಳು 17:30). ಆತನು ಅವರ ಮಧ್ಯದಲ್ಲಿ ಬೋಧಿಸದೆ ಇದ್ದರೆ ಮತ್ತು ಅದ್ಭುತಕಾರ್ಯಗಳನ್ನು ಮಾಡದಿದ್ದಲ್ಲಿ ಅವರು ಆತನನ್ನು ತಿರಸ್ಕರಿಸುವಂಥ ನಿರ್ಧಿಷ ಪಾಪದಿಂದ ಅವರ ದೋಷಿಗಳಾಗಿಲ್ಲ ಎಂದು ಕ್ರಿಸ್ತನು ಹೇಳುತ್ತಿದ್ದಾನೆ. ಆತನು ಅದನ್ನು ಮಾಡಿದ್ದರಿಂದ ಅವರಿಗೆ ಕ್ಷಮೆಯಿಲ್ಲ.

**15:25:** ಕೀರ್ತನೆ 35:19; 69:4 ರಿಂದ ವ್ಯಾಖ್ಯೆಗಳು.

**15:26, 27:** ಅಪೋಸ್ತಲರು ಎರಡು ಸಾಕ್ಷಿಗಳನ್ನು ಕೊಡಬೇಕಾಯಿತು: ಅವರು ವೈಯಕ್ತಿಕವಾಗಿ ಗಮನಿಸಿದ್ದರ ಬಗ್ಗೆ ಸಾಕ್ಷಿಕೊಡುವದು (ವಚನ 27; ನೋಡಿರಿ ಅಪೋಸ್ತಲರ ಕೃತ್ಯಗಳ 1:22), ಮತ್ತು ಪರಿಶುದ್ಧಾತ್ಮನ ಮೇಲೆ ಸಹ ಆತುಕೊಂಡ ಸಾಕ್ಷಿಯನ್ನೂ ಸಹ ಅವರು ಹೊಂದಿದ್ದರು (ವಚನ 26).

**16:5, 6:** "ಕರ್ತನೇ ನೀನೆಲ್ಲಿಗೆ ಹೋಗುತ್ತಿ?" ಎಂದು ಪೇತ್ರನು ಕೇಳಿದನು (ಯೋಹಾನ 13:36), ಮತ್ತು ತೋಮನು ಆತನ ಸ್ಥಳದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದನು (14:5). ಆದ್ದರಿಂದ, "ನೀನು ಎಲ್ಲಿ ಹೋಗುತ್ತೀ ಎಂದು ನಿಮ್ಮಲ್ಲಿ [ಯಾರು] ಒಬ್ಬರೂ ಕೇಳಬಾರದು?" ಎಂದು ಯೇಸು ಹೇಳಿದಾಗ ಆತನು ಕೇವಲ ಹೆಚ್ಚಾಗಿ ಪ್ರಶ್ನೆಯನ್ನು ಕೇಳುವ ಬಗ್ಗೆ ಮಾತನಾಡಿದನು. ಅವರ ಹೇಳುವ ಮಾತುಗಳ ಮೂಲಕ ಅವರ ಆಸಕ್ತಿ ನಿಜವಾಗಿಯೋ "ಎಲ್ಲಿಗೆ" ಎಂಬುದರಲ್ಲಿ ಇರಲಿಲ್ಲ ಎಂದು ಆತನ ಮಾತಿನ ಅರ್ಥವಾಗಿರಬಹುದು, ಆದರೆ ಕೇವಲ ಆತನು ಹೋಗುವುದರ ವಾಸ್ತವದಲ್ಲಿ ಇತ್ತು. ಬಿಡುವುದರ ಆತನ ಆಧಾರವು ಅವರ ಹೃದಯದಲ್ಲಿ ದುಃಖವನ್ನು ತುಂಬಿಸಿತು.

**16:20:** ಜಗತ್ತು ಯೇಸುವಿನ ಮರಣದಲ್ಲಿ ಸಂತೋಷಿಸಿತು (ನೋಡಿರಿ ಲೂಕ 22:5),

ಆತನನ್ನು ಪ್ರೀತಿಸುವವರು ಅತ್ತರ (ಯೋಹಾನ 20:11).

**16:21, 22:** ಮನನ ಜನನವು ನೋವನ್ನು ತರುತ್ತದೆ, ಆದರೆ ಜನನದ ನಂತರ ಸಂತೋಷವನ್ನು ತರುತ್ತದೆ. ಹಾಗೆಯೇ, ಕ್ರಿಸ್ತನ ಮರಣವು ಮೊದಲು ಆತನ ಹಿಂಬಾಲಕರಿಗೆ ನಿರಾಶೆಯನ್ನು ತಂದಿತು, ಆದರೆ ಈಗ ಆತನ ಮರಣವು ಜಗತ್ತನ್ನು ಸಂತಸದಿಂದ ತುಂಬಿಸಿತು.

**16:23:** ಆ ಸಮಯದಲ್ಲಿ ಅಪೊಸ್ತರು ಅನೇಕ ಪ್ರಶ್ನೆಗಳಿಂದ ತುಂಬಿದ್ದರು (13:36; 14:5, 8); ಆದರೆ ಯೇಸು ದೇವರೆಡೆಗೆ ಎಲಿಹೋದಾಗ, ಆತನಿಗೆ ಪ್ರಶ್ನೆಯನ್ನು ಕೇಳುವ ಅವಷ್ಯಕತೆಯು ಅವರಿಗಿರಲಿಲ್ಲ. ದೇವರು (ಪರಿಶುದ್ಧಾತ್ಮನ ಮೂಲಕ) ಅವರಿಗೆ ಆಶೀರ್ವಾದವುಂಟಾಗುವದು.

**16:26, 27:** ಯೇಸು ಅವರ ಪರವಾಗಿ ತನ್ನ ತಂದೆಗೆ ಭಿನ್ನಹವನ್ನು ಮಾಡಿಕೊಳ್ಳಲಾರೆ ಎಂದು ಹೇಳುತ್ತಿಲ್ಲ. ಈ ಪಾಠದಲ್ಲಿ ಗಮನಿಸಿದಂತೆ, ಆತನು ನಮ್ಮ ಮಧ್ಯವರ್ತಿಯಾಗಿದ್ದಾನೆ. ಬದಲಾಗಿ, ಆತನು ಅವರಿಗೆ ಸಹಾಯಿಸಲಿ ತನ್ನ ತಂದೆಯನ್ನು ಕೇಳಿಕೊಳ್ಳುವದು ಅನವಷ್ಯಕವಾದುದು ಯಾಕೆಂದರೆ ಏನೇ ಆಗಲಿ ತಂದೆಯು ಅವರನ್ನು ಪ್ರೀತಿಸುವವ ಆಗಿದ್ದಾನೆ ಎಂದು ಆತನು ಒತ್ತಿಹೇಳುತ್ತಾನೆ. ಪ್ರೀತಿಸದೆ ಇರುವ ದೇವರ ಅಶುದ್ಧವಾದ ಸಂಗತಿಯು ವಿವಿಧ ಮಾನವ ನಿರ್ಮಿತ "ಮಧ್ಯಸ್ಥಿಕೆಗಳು" (ಮರಿಯಳು ಮತ್ತು ಅಂಥ "ಸಂತರು"ರನ್ನು ಒಳಗೊಂಡು) ಬೆಳೆಯುವುದಕ್ಕೆ ಕಾರಣವಾಗಿದ್ದು ಅವುಗಳು ದೇವರಿಗೆ ಆತನ ಮಕ್ಕಳಿಗೆ ಸಹಾಯಮಾಡಲು ದೇವರನ್ನು ಒಪ್ಪಿಸುವಂತವು (ಮನುಷ್ಯನು ಕಲಿಸಲ್ಪಡುತ್ತಾನೆ) ಆಗಿದೆ. ಎಂಥಾ ಕೆಟ್ಟ ಸಿದ್ಧಾಂತ ಅವಷ್ಯವಿದ್ದದ್ದೆಲ್ಲವನ್ನೂ ಹೇಳಹುದಿತ್ತು.

**16:32:** ಏಕಂತಾತೆಯು ಭಯಂಕರವಾದದ್ದು ಆಗಿದೆ; ಆದರೆ ಒಬ್ಬ ಕೈಸ್ತನು, ಆತನ ತಂದೆಯು ಯಾವಾಗಲೂ ಆತನೊಂದಿಗೆ ಇರುವುದರಿಂದ ಆತನು ಎಂದಿಗೂ ನಿಜವಾಗಿ ಏಕಾಂಗಿಯಾಗಿರನು (2 ತಿಮೋಥೆ 4:16-18 ರೊಂದಿಗೆ ಹೋಲಿಸಿರಿ).

**17:2:** ದೇವರು ಈ ಭೂಮಿಯ ಮೇಲೆ ಮತ್ತು ಪರಲೋಕದ ಮೇಲೆ ಯೇಸುವಿಗೆ ಅಧಿಕಾರವನ್ನು ಕೊಟ್ಟಿದ್ದಾನೆ (ಮತ್ತಾಯ 28:18).

**17:3:** ನಿತ್ಯಜೀವನವು ದೇವರೊಂದಿಗೆ ಮತ್ತು ಯೇಸುವಿನೊಂದಿಗೆ ನಿತ್ಯಕ್ಕೂ ಇರುವುದನ್ನು ವ್ಯಾಖ್ಯಾನಿಸುವುದಾಗಿದೆ ನಿತ್ಯಮರಣವು ದೇವರಿಂದ ಮತ್ತು ಯೇಸುವಿನಿಂದ ನಿತ್ಯತ್ವದುದ್ದಕ್ಕೂ ಬೇರೆಯಾಗುವುದನ್ನು ವ್ಯಾಖ್ಯಾನಿಸುವುದಾಗಿದೆ (ನೋಡಿರಿ 2 ಥೆಸಲೊನೀಕ 1:9). ಅಂದರೆ. ನಾವು ಈಗಲೂ ಕೂಡಾ ನಿತ್ಯಜೀವವನ್ನು ಹೊಂದಬಹುದು. (ಯಾಕೆಂದರೆ ನಾವು ಜೀವಿಸುವಾಗ, ಕೆಲ ಸಂಬಂದವನ್ನು ಅಲ್ಲಿರುವ ಆಶೀರ್ವಾದದ ದಂಡನೆಯಿಂದ ನಮಗೆ ಬಂದಿರುವ ಸಾಧ್ಯತೆಯೂ ಇದೆ [ನೋಡಿರಿ ಯೋಹಾನ 15:6].)

**17:11, 14, 16:** ಅಪೊಸ್ತಲರಂತೆ ನಾವೂ "ಜಗತ್ತಿನಲ್ಲಿದ್ದೇವೆ" (ವಚನ 11) ಆದರೆ "ಜಗತ್ತಿನವರಲ್ಲ" (ವಚನಗಳು 14, 16).

**17:12:** ಯಾರೊಬ್ಬನೂ "ನಾಶವಾಗದೆ ನಾಶನದ ಮಗನು ಮಾತ್ರ ನಾಶವಾಗುತ್ತಾನೆ" ಎಂಬ ಕಂಠೋಕ್ತಿಯು ಆತನು ಹಾಗೆ ಮಾಡಿದಾಗ ಅಪೊಸ್ತಲರು ಸಾಯುವುದಿಲ್ಲ ಎಂಬ ವಿಚಾರವನ್ನು ಬಹುತೇಕ ಜನರು ಹೊಂದಿದ್ದರು (ನೋಡಿರಿ ಯೋಹಾನ 18:8, 9). "ನಾಶನದ ಮಗನು" ಯೂದನಾಗಿದ್ದನು. "ನಾಶನ" ಎಂದು ಭಾಷಾಂತರವಾದ ಪದವು ಸಂಯುಕ್ತ ಗ್ರೀಕ ಪದವಾಗಿದ್ದು ಇದು ಕೇಡಿನ ವಿಚಾರವನ್ನು ತರುವಂಥದ್ದಾಗಿದೆ. ಯೂದನು ನಿತ್ಯಕೇಡಿನ ಸಮಾಧಿಯನ್ನು ತೆಗೆದುಕೊಂಡನು (ಅದು ನರಕವೇ) ಯಾಕೆಂದರೆ ಆತನ ಪಾಪದ ಪಶ್ಚಾತ್ತಾಪದ ಆತನ ವಿಫಲತೆಯು ಕ್ರಿಸ್ತನ ಗುರುದ್ರೋಹವೇ ಆಗಿತ್ತು.

**17:17, 19:** "ಪರಿಶುದ್ಧಿಸು" ಎಂದರೆ "ಪ್ರತ್ಯೇಕಿಸು" ಎಂದಾಗಿದೆ. ವಾಕ್ಯದ ಮೂಲಕ ನಾವು ದೇವರ ವಾಕ್ಯಕ್ಕೆ ವಿಧೇಯರಾಗಿ ಹಾಗೂ ಕೈಸ್ತರಾದಾಗ ನಾವು ದೇವರ ಸೇವೆಗೋಸ್ಕರ

ಪ್ರತ್ಯೇಕಿಸಲ್ಪಟ್ಟರೂ ಆಗಿದ್ದೇವೆ (ನೋಡಿರಿ 1 ಕೊರಿಂಥ 6:11).

**17:18:** ದೇವರು ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿದನು (ನೋಡಿರಿ 17:3, 8, 21, 23, 25), ಮತ್ತು ಕ್ರಿಸ್ತನು ತನ್ನ ಅಪೊಸ್ತಲರನ್ನು ಕಳುಹಿಸುತ್ತಿದ್ದಾನೆ. "ಅಪೊಸ್ತಲ" ಎಂಬುದರ ಅರ್ಥವು "ಕಳುಹಿಸಲ್ಪಟ್ಟವನು" ಎಂದಾಗಿದೆ.

---

ಟಿಪ್ಪಣಿಗಳು

[1]ಆತನು (ಸೈತಾನನು) ನನಗೇನೋ ಮಾಡನು ಎಂಬುದನ್ನು NIV ಯಲ್ಲಿ, "ಆತನಿಗೆ ನನ್ನ ಮೇಲೆ ಯಾವ ಅಧಿಕಾರವೂ ಇಲ್ಲ" ನಾವಿರುವೆಡೆಗೆ ಹೇಳುವವರಾಗಿದ್ದೇವೆ. [2]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 666. [3]Author unknown, quoted in Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 355.

# ಪ್ರವಾದನೆಗಳಲ್ಲಿ ಯೇಸು

## (ಯೋಹಾನ 5:30-47)

*"ನನಗಂತೂ ಯೋಹಾನನ ಸಾಕ್ಷಿಗಿಂತಲೂ ಹೆಚ್ಚಿನ ಸಾಕ್ಷಿಯು ಉಂಟು; ಪೂರೈಸುವುದಕ್ಕೆ ತಂದೆ ನನಗೆ ಕೊಟ್ಟಿರುವ ಕೆಲಸಗಳು ಅಂದರೆ ನಾನು ಮಾಡುವ ಕೆಲಸಗಳೇ, ತಂದೆಯು ನನ್ನನ್ನು ಕಳುಹಿಸಿಕೊಟ್ಟನೆಂಬುದಾಗಿ ನನ್ನ ವಿಷಯದಲ್ಲಿ ಸಾಕ್ಷಿಕೊಡುತ್ತದೆ ... ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಿಸಿ ಅವುಗಳನ್ನು ವಿಚಾರಿಸುತ್ತೀರಲ್ಲ; ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳಾಗಿವೆ. ಆದರೂ ಜೀವಹೊಂದುವುದಕ್ಕಾಗಿ ನನ್ನ ಬಳಿಗೆ ಬರುವುದಕ್ಕೆ ನಿಮಗೆ ಮನಸ್ಸಿಲ್ಲ ... ನಾನು ತಂದೆಯ ಮುಂದೆ ನಿಮ್ಮ ಮೇಲೆ ತಪ್ಪುಹೊರಿಸುವೆನೆಂದು ನೆನಸಬೇಡಿರಿ; ನೀವು ಆಶ್ರಯಿಸಿಕೊಂಡಿರುವ ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ. ಅವನು ಬರೆದ ಮಾತುಗಳನ್ನು ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬೀರಿ?" (ಯೋಹಾನ 5:36-47).*

### ಪೀಠಿಕೆ

ನೀವು ಹುಟ್ಟುವ ನೂರುವರ್ಷದ ಹಿಂದೆಯೇ, ನಿಮ್ಮ ಹುಟ್ಟು ನಿಮ್ಮ ಹುಟ್ಟಿನ ಸಮಯ, ನೀವು ಹುಟ್ಟಿದ ಸ್ಥಳ, ನಿಮ್ಮ ಕುಟುಂಬದ ಹಿನ್ನಲೆ, ನಿಮ್ಮ ಗುಣಲಕ್ಷಣಗಳು, ನಿಮ್ಮ ಜೀವಿತದಲ್ಲಿನ ಅನೇಕ ಘಟನೆಗಳು ಮತ್ತು ನೀವು ಮರಣಿಸಲಿರುವ ಸಮಯ ಮತ್ತು ಇನ್ನಿತರ ನಿಮ್ಮ ಜೀವನದ ಘಟನೆಗಳನ್ನು ಮತ್ತು ಮರಣಿಸಲಿರುವ ರೀತಿಯ ಸಂಪೂರ್ಣ ಚಿತ್ರಣವನ್ನು ನಾನು ಕೊಡುವವನಾಗಿದ್ದರೆ ಏನಾಗಬಹುದು? ಅಸಾಧ್ಯ. ಮನೂಷ್ಯನು ಹೌದು, ಆದರೆ ದೇವರಿಗಲ್ಲ. ಯೇಸುವಿನ ಸಂಪೂರ್ಣ ಇತಿಹಾಸವು ಆತನು ಜನಿಸುವುದಕ್ಕಿಂತ ನೂರು ವರ್ಷ ಮುಂಚೆಯೇ ಬರೆಯಲ್ಪಟ್ಟಿತ್ತು!

### ಹಳೆಯ ಒಡಂಬಡಿಕೆಯ ಪ್ರವಾದನೆಯ ಪ್ರಾಭಲ್ಯ

ತನ್ನ ದೈವತ್ವಕ್ಕಾಗಿ ನಾಲ್ಕು ಸಾಕ್ಷಿಗಳನ್ನು ಯೇಸುವು ಹೇಸರಿಸುತ್ತಾನೆ (ಯೋಹಾನ 5:30-47). ಮೊದನೆಯದು ಶಾಸ್ತ್ರಗಳು[1] ಹಳೆಯ ಒಡಂಬಡಿಕೆಯು ಒಂದೇ ಸಮನೆ ಮೆಸ್ಸೀಯನ ಬಗ್ಗೆ ಆಧಾರಗಳನ್ನು ಸ್ಥಾಪಿಸಿವೆ; ಯೇಸು ಮೆಸ್ಸೀಯನೆಂದು ಪ್ರತಿಪಾದಿಸಿದನು (ಲೂಕ 24:25-27). ಎಂಥ ಧೈರ್ಯದಾಯಕವಾದ ಪ್ರತಿಪಾದನೆಯು ಇದಾಗಿತ್ತು ಎಂಬುದನ್ನು ಗಮನಿಸಿರಿ. ಯೆಹೂದಿಗಳು ಇದನ್ನು ತಿಳಿದಿರಲಿಲ್ಲವೆಂದಲ್ಲ; ಅವರು ಶಾಸ್ತ್ರಗಳನ್ನು ತಿಳಿದಿದ್ದರು. ಅವರು ಮೆಸ್ಸೀಯನಿಗಾಗಿ ಎದುರುನೋಡುವವರಾಗಿದ್ದರು. ಅವರು ನಟನೆಯ ಜೀವಿತವನ್ನು ಪರಿಕ್ಷಿಸುವಷ್ಟು ಸಮರ್ಥರಾಗಿದ್ದರು. ತಾನು ಮೆಸ್ಸೀಯನಗೋಸ್ಕರದ ಎಲ್ಲ ಅವಷ್ಯಕತೆಗಳನ್ನು ಸಂಪೂರ್ಣಗೊಳಿಸಿದ್ದಾಗಿ ಆತನು ಪ್ರತಿಪಾದಿಸಿದನು ಮತ್ತು ಆತನ ಪ್ರತಿಪಾದನೆಯನ್ನು ಅವರು ಅಲ್ಲಗಳೆಯಲಾರದವರಾಗಿದ್ದರು. ಯೇಸುವಿನ ಜೀವಿತ ಮತ್ತು ಸೇವೆಯನ್ನು ಒಂದಾದರೂ ಪ್ರವಾದನೆಯು ಪರಿಪೂರ್ಣಗೊಳಿಸಲಿಲ್ಲ ಎಂದು ಅವರು ಎಂದಾದರೂ ಕಂಡುಕೊಂಡಿದ್ದಾದ್ದರೆ, ಅವರು ಆತನ ಪ್ರತಿಪಾದನೆಯನ್ನು ಅಂತ್ಯಗೊಳಿಸಿಬಿಡುತ್ತಿದ್ದರು.

ಪಂಚಾಶತ್ತಮ ದಿನದ ನಂತರ, ಅಪೊಸ್ತಲರು ತಮ್ಮ ಬೋಧನೆಯನ್ನು ಆರಂಭಿಸಿದಂತೆಯೇ, ಅವರೂ ಸಹ ಯೇಸುವು ಮೆಸ್ಸೀಯನಾಗಿದ್ದಾನೆ ಎಂಬ ಪ್ರತಿಪಾದನೆಯನ್ನು ಮಾಡಿದರು. ಇನ್ನೂ ಕಲಿಸಲ್ಪಟ್ಟ ಯೆಹೂದಿಗಳು ಈ ಪ್ರತಿಪಾದನೆಯನ್ನು

ಅಲ್ಲಗಳೆಯಲಾರದವರು ಆಗಿದ್ದರು. ಯೇಸು ದೇವರು ಮಗನು ಆಗಿದ್ದನು ಮತ್ತು ಆಗಿದ್ದಾನೆ. ಯೇಸು ಎಲ್ಲ ಪ್ರವಾದನೆಗಳನ್ನು ಸಂಪೂರ್ಣಗೊಳಿಸಿದಂತೆ ಕೇವಲ ಸಂಪೂರ್ಣ ಗೊಳಿಸಲಾರನು; ಯಾವೊಬ್ಬ ನಟನೂ ಕೂಡಾ ಯೆಹೂದಿಗಳನ್ನು ಮೂರ್ಖರನ್ನಾಗಿಸನು. ಬಹು ಪ್ರವಾದನೆಗಳೊಂದಿಗೆ ವ್ಯವಹರಿಸುವ ಮತ್ತು ನೂರಾರು ಪಂಡಿತರು ಪ್ರತಿಯೊಂದೂ ಪ್ರತಿಪಾದನೆಯನ್ನು ವೇದದೊಡನೆ ಹೋಲಿಸುವವರಾಗಿದ್ದಾರೆ, ಇದರಲ್ಲಿ ಒಬ್ಬ ನಟನು ತಪ್ಪಿನಲ್ಲಿ ಸಿಕ್ಕದೇ ಇರುವುದು ಅಸಾಧ್ಯವಾದದ್ದು ಆಗಿದೆ.

ಮುಂದೆ, ಪ್ರವಾದನೆಯ ಸಂಗತಿಗಳು, ಯೇಸುವಿನ ನಿಯಂತ್ರಣದಲ್ಲಿ ಇರಲಿಲ್ಲ ಅವುಗಳು ಆತನ ವಂಶಜರು, ಆತನ ಜನಿಸಿದಾಗ ಶಿಶುವಾದ ಆತನನ್ನು ಐಗುಪ್ತಕ್ಕೆ ಕರೆದೊಯ್ದರು. ಅಂಥ ಮುಂತಿಳಿಸುವಿಕೆಯ ಸಂಪೂರ್ಣಗೊಳಿಸುವಿಕೆಯ ಸರಿದೂಗಿಸುವುದಾಗಿದೆ. ಯೇಸು ಯಾರಾಗಿದ್ದಾನೆ ಎಂಬುದನ್ನು ಅಂಗೀಕರಿಸಿಕೊಳ್ಳುವುದು ನಮಗೆ ಅವಷ್ಯವಿದೆ!

## ಹಳೆ ಒಡಂಬಡಿಕೆಯ ಪ್ರವಾದನೆಯ ಸಂಪೂರ್ಣಗೊಳಿಸುವಿಕೆ

ಮೆಸ್ಸೀಯನ ಬಗೆಗಿನ ಪ್ರವಾದನೆಯು ಆದಿ 3:15 ಮತ್ತು 12:3 ರಿಂದ ಆರಂಭವಾ ಗುತ್ತದೆ. ಜನರು ಕತ್ತಲೆಯ ಯುಗಗಳಲ್ಲಿ ತಡವರಿದಂತೆಯೇ ಇಂಥ ಪರಿಚ್ಚೇದಗಳು ಬರಲಿರುವ ರಕ್ಷಕನನ್ನು ನೋಡುವಂತೆ ಪ್ರೇರೇಪಿಸುವವುಗಳಾಗಿದೆ.

ನೂರಾರು ಪ್ರವಾದನೆಗಳು ಮೆಸ್ಸೀಯನ ಬಗ್ಗೆ ಮಾತನಾಡುವವುಗಳು ಆಗಿವೆ, ಆದರೆ ಇದನ್ನು ಪುರಾವೆಗೊಳಿಸಲು ಮುಂದಿನ ಉದಾಹರಣೆಗಳು ಸಾಕಷ್ಟಾಗಿವೆ. ಕ್ರಿಸ್ತನು ಜನಿಸುವುದಕ್ಕಿಂತ ಮುಂಚೆ ನೂರಾರು ವರ್ಷಗಳ ಹಿಂದೆ ಬರೆಯಲ್ಪಟ್ಟ ಶಾಸ್ತ್ರಗಳನ್ನು ಆತನು ಪೂರ್ಣಗೊಳಿಸಿದನು.

### ಸಮಯ

ಹಳೆಯಒಡಂಬಡಿಕೆಯು ಮೆಸ್ಸೀಯನ ರಾಜ್ಯವು ಯಾವಾಗ ಸ್ಥಾಪಿತವಾಗುದೆಂಬ ಸಮಯವನ್ನು ಸೂಚಿಸುತ್ತವೆ ದಾನಿಯೇಲ 2:44 ಮುಂದಿನ ಜಾಗತಿಕ ರಾಜ್ಯವಾದ ರೋಮ ಸಾಮ್ರಾಜ್ಯವನ್ನು ಸೂಚಿಸುತ್ತಾ “ಆ ಅರಸರ ದಿನಗಳಲ್ಲಿ ಪರಲೋಕದ ದೇವರು ಎಂದಿಗೂ ನಾಶವಾಗದ ರಾಜ್ಯವನ್ನು ಸ್ಥಾಪಿಸುವನು” ಎಂದು ಹೇಳುತ್ತದೆ. ಲೂಕ 2:1, ಯೇಸುವಿನ ಜನನ, ರೋಮ ಚಕ್ರಾಧಿಪತಿಯಾದ ಅಗಸ್ಟಸ್ ಸೀಝರನಿಂದ ಆ ಕಾಲದಲ್ಲಿ ಆಜ್ಞಾಪಿಸಲ್ಪಟ ಖಾನೇಶಿಮಾರಿಯನ್ನು ಅಂಶವನ್ನೂ ಕೂಡಾ ಬಿಡದೆ ಇರುವ ವಿವರವನ್ನು ಹೊಂದಿದೆ.

ದಾನಿಯೇಲ 9:25 “... ಆ ಕಾಲವು ಬಹು ಕಷ್ಟಕಾಲ. ಅರವತ್ತೆರಡು ವಾರಗಳಾದ ಮೇಲೆ ಅಭಿಶಕ್ತನೊಬ್ಬನು ಛೇದಿಸಲ್ಪಡುವನು” ಈ ಪರಿಚ್ಚೇದದಲ್ಲಿ ಸೂಚಿತವಾದ ವಾರಗಳ ಎಣಿಕೆಯ ಪ್ರಯತ್ನವು ಆಗಿದ್ದಾಗ್ಯೂ ಸಾಮಾನ್ಯ ವಿಚಾರವು ಸ್ಪಷ್ಟವಾಗಿದೆ. ಪ್ರಮುಖ ಘಟನೆಯು ಬರುವುದಾಗಿತ್ತು. ಈ ಘಟನೆಯು “ಅಧರ್ಮವನ್ನು ಕೊನೆಗಾಣಿಸುವದು, ಪಾಪಗಳನ್ನು ತೀರಿಸುವದು, ಅಪರಾಧವನ್ನು ನಿವಾರಿಸುವದು, ಸನಾತನ ಧರ್ಮವನ್ನು ಸ್ಥಾಪಿಸುವದು ಕನಸನ್ನೂ ಪ್ರವಾದಿಯ ನುಡಿಯನ್ನೂ ಮುದ್ರೆಹಾಕಿ ಯಥಾರ್ಥ ಮಾಡುವದು, ಅತಿ ಪರಿಶುದ್ಧವಾದದ್ದನ್ನು ಅಭಿಷೇಕಿಸುವದೂ, ಆಗಿದೆ” (ದಾನಿಯೇಲ 9:24). Neale Pryor ರವರು ಹೇಳುವಂತೆ, “ಈ ಸಂಗತಿಗಳು ಮೆಸ್ಸೀಯನಿಂದ ಮಾತ್ರ ನೆರವೇರಿಸಲ್ಪಡುತ್ತವೆ.”[2]

ಮಲಾಕಿಯ 3:1ರಲ್ಲಿ ಕರ್ತನು ದೇವಾಲಯದಲ್ಲಿ ಪಕ್ಕನೇ ಬರುವನು ಎಂದು ಪ್ರವಾ ದಿಯು ಸೂಚಿಸಿದ್ದಾನೆ. ಈ ದೇವಾಲಯವು ಯೇಸು ತನ್ನ ಸೇವೆಯನ್ನು ಪ್ರಾರಂಭಿಸಿದಾಗ ಹೆರೋದನು ಇದನ್ನು ಪುನಃ ಕಟ್ಟುತ್ತಾ ಇದ್ದನು.

### ಕ್ರಿಸ್ತನ ವಂಶಾವಳಿ

ಆದಿಕಾಂಡ. 22:18ರಲ್ಲಿ ದೇವರ ಅಬ್ರಹಾಮನಿಗೆ “ನೀನು ನನ್ನ ಮಾತನ್ನು ಕೇಳಿದ್ದರಿಂದ

ಭೂಮಿಯ ಎಲ್ಲಾ ಜನಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದಿಸು" ಎಂದು ಹೇಳಿದನು. ಅಬ್ರಹಾಮನ ಮೋಮ್ಮಗನಾದ ಯಾಕೋಬನು (ಇಸ್ರಾಯೇಲ) ತನ್ನ ಮಕ್ಕಳನ್ನು ಆಶೀರ್ವದಿಸುತ್ತಾ "ರಾಜದಂಡವನ್ನು ಹಿಡಿಯತಕ್ಕವನು ಬರುವತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ, ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ ..." ಎಂದು ಪ್ರವಾದಿಸಿದನು (ಆದಿಕಾಂಡ 49:10). ಯೆರೆಮೀಯ 23:5, 6ರಲ್ಲಿ "... ದಾವೀಜನ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು ... ಆತನು ರಾಜನಾಗಿ ಆಳುತ್ತಾ ..." ಎಂದು ಓದುತ್ತೇವೆ. ಮೆಸ್ಸೀಯ ವಂಶಜನು ಅಬ್ರಹಾಮ, ಯೂದ, ಮತ್ತು ದಾವೀದರನ್ನು ಒಳಗೊಂಡಿದ್ದನು. ಮತ್ತಾಯ 1: ವಚನಗಳು 2, 3 ಮತ್ತು 6 ರಲ್ಲಿನ ಪಟ್ಟಿಯಲ್ಲಿ ಯೇಸುವಿನ ಪಿತೃಗಳ ಭಾಗವಾದಂತ ಅಬ್ರಹಾಮ, ಯೂದ, ಮತ್ತು ದಾವೀದರ ವಂಶಾವಳಿಯನ್ನು ಪರೀಕ್ಷಿಸಿರಿ. ಇತರ ಪರಿಚ್ಛೇದಗಳು ಯೇಸು ಅಬ್ರಹಾಮನ (ಗಲಾತ್ಯ 3:16), ಯೂದನ (ಇಬ್ರೀಯ 7:14), ಮತ್ತು ದಾವೀದನ (2 ತಿಮೋಥೆ 2:8).

**ಕ್ರಿಸ್ತನ ಜನನದ ಸ್ಥಳ**

ಈ ಪ್ರವಾದನೆಯು ಮೀಕ 5:2ರಲ್ಲಿ, "ಎಫ್ರಾತದ ಬೆತ್ಲಹೇಮ್ ... ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು. ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಅದದ್ದು" ಎಂದು ಕೊಡಲ್ಪಟ್ಟಿದೆ. ಯೆಹೂದಿ ಪಂಡಿತರು ಈ ಮುಂತಿಳಿಸುವಿಕೆಯ ಬಗ್ಗೆ ಎಚ್ಚರದಿಂದ ಇದ್ದರು ಮತ್ತು ಮೆಸ್ಸೀಯನು ಎಲ್ಲಿ ಹುಟ್ಟಬಹುದು ಎಂದು ಹೆರೋದನು ಕೇಳಿದಾಗ ಅದಕ್ಕೆ ಉತ್ತರ ಕೊಡಲು ಸಮರ್ಥರಿದ್ದರು (ಮತ್ತಾಯ 2:5, 6). ಯೇಸು ಎಲ್ಲಿ ಹುಟ್ಟಬಹುದೆಂದು ಪ್ರವಾದಿಗಳು ಹೇಳಿದ ಸ್ಥಳದಲ್ಲಿಯೇ ಯೇಸು ಹುಟ್ಟಿದನು (ಲೂಕ 2:4-6).

**ಕ್ರಿಸ್ತನ ಜೀವಿತ**

ಮೆಸ್ಸೀಯನ ಜೀವಿತಕ್ಕೆ ಸಂಭಂಧಿಸಿದಂತೆ ಅನೇಕ ಸತ್ಯಾಂಶಗಳು ಹಳೆಯ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಿವೆ. ಇವುಗಳು ಯೇಸುವಿನ ಜೀವಿತದಲ್ಲಿ ಸಂಪೂರ್ಣವಾಗಿವೆ. ಮೆಸ್ಸೀಯನು "ಐಗುಪ್ತದಿಂದ ಕರೆಯಲ್ಪಟ್ಟವನು" ಆಗಿರುವವನಾಗಿದ್ದನು (ಹೊಶೆಯ 11:1; ನೋಡಿರಿ ಮತ್ತಾಯ 2:13-15). ಆತನು ವೈಪರಿತ್ಯ ಸನ್ನಿವೇಷಗಳ ಮಧ್ಯದಲ್ಲಿ ಬೆಳದು ಬಂದನು (ಯೇಶಾಯ 53:2; ನೋಡಿರಿ ಮತ್ತಾಯ 2:19-23; ಯೋಹಾನ 1:46). ಆತನ ಸೇವೆಯು, ಆತನಿಗಾಗಿ ಮಾರ್ಗವನ್ನು ಸಿದ್ಧಮಾಡಿದಂತವನಾದ ಎಲೀಯನಂತವನಿಂದ ಪ್ರಾಧಾನ್ಯತೆಯನ್ನು ಪಡೆಯಿತು (ಯೇಶಾಯ 40:3; ಮಲಾಕಿ 3:1; ನೋಡಿರಿ ಮತ್ತಾಯ 17:10-13; ಮಾರ್ಕ 1:2-4; ಲೂಕ 1:17). ಆತನು ತನ್ನ ಸೇವೆಯಲ್ಲಿ ಒಳ್ಳೆಯದನ್ನು ಮಾಡುವವನಾಗಿದ್ದಾನೆ (ಯೇಶಾಯ 35:5, 6; ನೋಡಿರಿ ಮತ್ತಾಯ 11:2-5; ಲೂಕ 7:21, 22). ಅದಲ್ಲದೆ, ಅತನು ದ್ವೇಶಿಸಲ್ಪಡುವವನೂ ಮತ್ತು ತಿರಸ್ಕರಿಸಲ್ಪಡುವವನೂ ಆಗಿದ್ದಾನೆ (ಯೇಶಾಯ 53:3; ನೋಡಿರಿ ಯೋಹಾನ 1:11; 15:18, 24).

**ಕ್ರಿಸ್ತನ ಕೊನೆಯ ವಾರ**

ಅರಸನು ಕತ್ತೆಯ ಮೇಲೆ ಯೆರೂಸಲೇಮಿಗೆ ಬರುವುದನ್ನೂ ಜಯಘೋಶದ ಪ್ರವೇಶದ ದೃಷ್ಯದ ಮುಂತಿಳಿಸುವಿಕೆಯನ್ನು ಜೆಕರ್ಯನು ವರ್ಣಿಸಿದ್ದಾನೆ (ಜೆಕರ್ಯ 9:9; ಮಾರ್ಕ 11:1-10). ಮೂವತ್ತು ತೊಲ ಬೆಳ್ಳಿಯನ್ನು ಯೆಹೋವನ ಡಬ್ಬಿಗೆ ಹಾಕುವುದಕ್ಕೆ ಹೇಳಲಾಯಿತು; ಇದು ಯೂದನ ಗುರದ್ರೊಹದ ಪರಿಪೂರ್ಣತೆಯ ಜೊತೆ ಸಂಬಂಧವನ್ನು ಹೊಂದಿದೆ (ನೋಡಿರಿ ಜೆಕರ್ಯ 11:12, 13; ಮತ್ತಾಯ 26:14; 27:5-7). ಯೇಶಾಯನು ಯೇಸುವಿನ ಮರಣದ ನೋವುಯುಕ್ತವಾದ ಘಟನೆಗಳತ್ತ ಮುನ್ನಡೆಸಿದ್ದಾನೆ (ಯೇಶಾಯ 50:6; 53:7;

ನೋಡಿರಿ ಅಪೊಸ್ತಲರ ಕೃತ್ಯಗಳು 8:32-35).

**ಕ್ರಿಸ್ತನ ಮರಣ**

ಮೆಸ್ಸೀಯನು ಮರಣದ ಕೊಂಡಿಯನ್ನು "ಮುರಿದು ಹಾಕುವನು" (ಯೇಶಾಯ 53:8; ದಾನಿಯೇಲ 9:26) ಮತ್ತು ಅಳಿಸಿಬಿಡುವನು (ಕೀರ್ತನೆ 22:1, 6-8, 16-18). ಆತನು ಚುಚ್ಚಲ್ಪಡುವನು (ಕೀರ್ತನೆ 22:16: ಜೆಕರ್ಯ 12:10), ಆದರೆ ಆತನ ಎಲುಬುಗಳಲ್ಲಿ ಒಂದೂ ಕೂಡಾ ಮುರಿಯುವುದಿಲ್ಲ (ಕೀರ್ತನೆ 34:20) ಎಂದು ಹಳೆಯಒಡಂಬಡಿಕೆಯು ಹೇಳುತ್ತದೆ. ಇವುಗಳು ಮತ್ತು ಇತರ ಪ್ರವಾದನೆಗಳು ನಾಟಕೀಯವಾಗಿ ಯೇಸುವಿನ ಮರಣದ ಪ್ರವಾದನೆಗಳನ್ನು ಸಂಪೂರ್ಣಗೊಳಿಸಿದವು. (ಓದಿರಿ ಯೋಹಾನ 19:23, 24, 34, 36, 37.)

**ಯೇಸುವಿನ ಹೂಣುವಿಕೆ**

ಕ್ರಿಸ್ತನ ಹೂಣುವಿಕೆಯ ಸನ್ನಿವೇಶಗಳೂ ಕೂಡಾ ಆತನ ಜನನಕ್ಕಿಂತ ಮುಂಚೆಯೇ ಮುನ್ನುಡಿಯಲ್ಪಟ್ಟಿದ್ದವು. ಆತನು ದುಷ್ಟಜನರ ಜೊತೆ ಮರಣಿಸುತ್ತಾನೆ ಆದರೆ ಶ್ರೀಮಂತರಲ್ಲಿ ಹೂಣಲ್ಪಡುತ್ತಾನೆ (ಯೇಶಾಯ 53:9). ಈ ವಿವರಣೆಗಳೂ ಸಹ, ಸಂಪೂರ್ಣಗೊಂಡವು. ಈ ವಿವರಣೆಯನ್ನು ಮತ್ತಾಯ 27:57-60ರಲ್ಲಿ ಓದಿರಿ.

## ಸಮಾರೋಪ

ಇದು ಮತ್ತು ಇತರ ಪ್ರವಾದನೆಗಳು ನಮ್ಮ ನಂಬಿಕೆಯನ್ನು ಬಲಪಡಿಸಲು ಮಹತ್ವದ ಖಜಾನೆಯನ್ನು ಒದಗಿಸುವವು ಆಗಿವೆ. ಯೇಸು ದೇವರ ಮಗನೆಂದು ನಾವು ನಿಜವಾಗಿಯೂ ನಂಬುವವರಾಗಿದ್ದೇವೆಯಾ? ಆ ನಂಬಿಕೆಯನ್ನು ಕಾರ್ಯಗತಗೊಳಿಸುವಾ! (ಓದಿರಿ ಮತ್ತಾಯ 7:21; ಲೂಕ 6:46.)

---

ಟಿಪ್ಪಣಿಗಳು

[1]ಯೇಸುವಿನಿಂದ ಹೆಸರಿಸಲ್ಪಟ್ಟ ಇತರ ಮೂವರು ದೇವರು, ಯೋಹಾನ ಮತ್ತು ಅದ್ಭುತ ಕಾರ್ಯಗಳು. [2]Neale Pryor, "A Prayer & Its Answer," in "Daniel, 2," *Truth for Today* (June 2001): 51.

# ಗೆತ್ಸೆಮನೆಯ ತೋಟ:

## ಒಂದು ಕಥಾತ್ಮಕ ನೋಟ

ಒಂದು "ಕಥಾತ್ಮಕ ಪ್ರಸಂಗ" ಕೇವಲ ಕಥೆಯನ್ನು ಹೇಳುವುದಾಗಿದೆ ಮತ್ತು ನಂತರ ಹೆಚ್ಚು ಕಡಿಮೆ ಕೇಳುಗರು ತಮ್ಮ ಸ್ವಂತ ಅನ್ವಯವನ್ನು ಮಾಡುವುದಕ್ಕೆ ಇದು ನಡೆಸುವುದಾಗಿದೆ. ದೇವವಾಕ್ಯದ ಕೆಲ ಭಾಗಗಳು ಕಥಾತ್ಮಕ ವಿವರಣೆಗಾಗಿ ಕೂಗುವವು ಆಗಿವೆ. ತೋಟದಲ್ಲಿ ಯೇಸು ಎಂಬ ಪ್ರಕರಣ ಅಂಥ ಒಂದು ಭಾಗವಾಗಿದೆ. ಗೆತ್ಸೆಮನೆಯ ಕಥೆಯಂಥ ಇಂಥ ಸಂಗತಿಯನ್ನು ಪ್ರಯತ್ನಿಸಲು ನೀವು ನಿರ್ಧರಿಸಿದ್ದೇ ಆ ಘಟನೆಗೆ ಸಂಬಂಧಿಸಿದಂತಹ ಅದಕ್ಕೆ ಉಪಯೋಗಿಸಲು ಸಾಧ್ಯವಾದ ಸಂಗತಿಗಳನ್ನು ಬೈಬಲ್ ಪಾಠದಿಂದ ಮತ್ತು ಪ್ರಸಂಗಗಳಿಂದ ನೀವು ಪಡೆಯಬಹುದು.

ಮುಂದಿನವು ಅದಕ್ಕೆ ಹೊಂದಿಕೆಯಾಗುವ ಉತ್ತೇಜನಪೂರಕ ವಿಚಾರಗಳು ಆಗಿವೆ. ಮೇಲುಪ್ಪರಿಗೆ ಕೋಣೆಯ ದೃಷ್ಯಗಳನ್ನು ಪುನರಾವರ್ತಿಸುವ ಮೂಲಕ ನೀವು ಪ್ರಾರಂಭಿಸಬಹುದು. ಇವುಗಳು ಗೆತ್ಸೆಮನೆಯ ತೋಟದ ಸಂಗತಿಗೆ ಭಾವಾನಾತ್ಮಕ ಸನ್ನಿವೇಶ ಗಳನ್ನು ನಿರ್ಮಿಸುವವು ಆಗಿವೆ.

ಯೇಸು ಮತ್ತು ಆತನ ಶಿಷ್ಯರು ಮೇಲುಪ್ಪರಿಗೆಯ ಕೋಣೆಯನ್ನು ಬಿಡುವುದನ್ನು ಮತ್ತು ಯೆರೂಸಲೇಮಿನ ಇಕ್ಕಟ್ಟಾದ ಬೀದಿಯಲ್ಲಿ ಅವರು ನಡೆಯುವುದನ್ನು ಊಹಿಸಿಕೊಳ್ಳಿರಿ: "ಇಡೀ ಪಟ್ಟಣವು ಮಲಗಿ ನಿದ್ರಿಸುತ್ತಿತ್ತು. ಎಲ್ಲೆಲ್ಲೂ ನೀರವ್ರೂ, ಸುಸ್ತಾದ ಯಾತ್ರಿಕನು ನಿಟ್ಟಿಸುರನ್ನು ಬಿಡುತ್ತಾ ಅವಿಶ್ರಾಂತವಾಗಿ ಹಾಸಿಗೆಯ ಮೇಲೆ ಉರುಳಿದ್ದಾನೆ ಅಲ್ಲಲ್ಲಿ ಮನೆಗೆ ಧಾವಿಸಲು ಓಡಾಡುತ್ತಿರುವವರ ಅವಸರದ ಹೆಜ್ಜೆಸದ್ದು, ಅಥವಾ ಕಾವಲುಗಾರನು ತನ್ನ ಸುತ್ತಿನ ಅಳತೆ ಮಾಡುವುದಕ್ಕಾಗಿ ಅಲೆಯುತ್ತಿರುವ ಸದ್ದು ಅಲ್ಲಿತ್ತು."[1]

"ಗೆತ್ಸೆಮನೆಯ ದಾರಿಯಲ್ಲಿನ [ಕಿದ್ರೋನ್] ಹಳ್ಳವನ್ನು ಅವರು ದಾಟಿದರು, ಚಳಿಯ ಸುರಿತವು ಹೆಚ್ಚುತ್ತಾ ಹೋಯಿತು ಮತ್ತು ಪಸ್ಕದ ಹಬ್ಬಕ್ಕಾಗಿ ಬಲಿ ಅರ್ಪಿಸಿ ಹತಮಾಡಿದ ಪ್ರಾಣಿಗಳ ರಕ್ತವು ಕೆಂಪಿನ ಬಣ್ಣದ ಜೊತೆ ಸೇರಿಕೊಂಡಿತ್ತು."[2] "ವೇದಿಕೆಯಿಂದ [ದೇವಾಲ ಯದಲ್ಲಿನ ಸರ್ವಾಂಗ ಹೋಮದಿಂದ ಕಾಣಿಕೆಯಿಂದ] ಕಿದ್ರೋನ್ ಹಳ್ಳದವರೆಗೆ ಒಂದು ಕಾಲುವೆಯು ಮಾಡಲ್ಪಟ್ಟಿತ್ತು. ಆ ಕಾಲುವೆಯು ಯುದ್ಧಕ್ಕೂ ಕುರಿಯ ರಕ್ತವು ಬತ್ತಿಹೋಗಿತ್ತು. ಯೇಸು ಆ ಹಳ್ಳವನ್ನು ಹಾದುಹೋಗುವಾಗ ಅದು ಇನ್ನೂ ಬಲಿ ಅರ್ಪಿಸಿದ ಕುರಿಯ ರಕ್ತದಿಂದ ಕೆಂಪಾಗಿ ಇತ್ತು ಮತ್ತು ಆತನು ಅದರಂತೆ ಆಗಬೇಕಿತ್ತು, ತನ್ನ ಸ್ವಂತ ಬಲಿಯ ನಿಶ್ಚಿತವಾಗಿ ಆತನ ಮನದಲ್ಲಿ ಸ್ಪುಟವಾಗಿತ್ತು."[3]

ಅವರು ಗೆತ್ಸೆಮನೆಯ ತೋಟವನ್ನು ಪ್ರವೇಶಿಸಿದಾಗ "ಅಲ್ಲಿ ಪೂರ್ಣಚಂದ್ರನ ಬೆಳಕಿತ್ತು ಮತ್ತು ತೋಪು ಆ ಮೃದು ಬೆಳಕಿನಲ್ಲಿ ತೊಳೆದಂತಿತ್ತು. ಸೌಮ್ಯವಾದ ಗಾಳಿ ಪ್ರಾಚೀನ ಮರಗಳ ಬೂದುಹಸಿರಿನ ಎಲೆಗಳ ಮೇಲೆ ಸುಳಿದಾಡುತ್ತಿತ್ತು."[4] "ಹಳೆಯ ಕಂದುಬಣ್ಣವೇರಿದ ಬೂದು ಎಲೆಯುಳ್ಳ ಆ ಮರಗಳು ಶ್ರೇಷ್ಟ ಮರಗಳು ಆಗಿದ್ದವು." ಆ ಮರಗಳು ವಿಕಸಿತವಾಗುವುದಕ್ಕೆ ಮುನ್ನ,[5] "ಹಿಂದಿನ ಚಳಿಯ ಸುಗ್ಗಿಯಲ್ಲಿನ ಕಲ್ಲಿನ ಮೇಲೆ ಹತ್ತಿರುವ ಸುಗಂಧದ ಎಣ್ಣೆಯು ಅಲಲ್ಲಿ ಹರಿದಾಡುತ್ತಿತ್ತು."[6]

ನಿಮ್ಮನ್ನು ನೀವು ಯೇಸುವಿನ ಸ್ಥಾನದಲ್ಲಿ ಇರಿಸಿಕೊಳ್ಳಿರಿ ಆತನ ಆಂತರ್ಯದ ತುಮುಲವನ್ನು ಊಹಿಸಿಕೊಳ್ಳಿರಿ. ನೆಲದ ಮೇಲೆ ನೀವಿದ್ದುಕೊಂಡು ಕಲ್ಲುಗಳುಳ್ಳ ಮಣ್ಣಿನ ಮೇಲೆ ನಿಮ್ಮ ಮುಖವನ್ನು ಒದುತ್ತಾ ನೀವಿದ್ದೀರಿ (ಮತ್ತು ವಿರಳವಾದ ಆ ನೆಲವು ಆ ಸ್ಥಳವನ್ನು ಮುಚ್ಚಿಯದೆ), ದೇವರ ಮುಂದೆ ನಿಮ್ಮ ಹೃದಯವನ್ನು ತೋಡಿಕೊಂಡಿದ್ದೀರಿ. ನಿಮ್ಮ ನಿಮ್ಮ

ಎಲ್ಲಾ ಇಂದ್ರೀಯಗಳನ್ನು ಕ್ರಿಯಾಶೀಲವಾಗಿಟ್ಟುಕೊಳ್ಳಿರಿ: ದೇವರ ಮುಂದೆ ನಿಮ್ಮ ಹೃದಯವನ್ನು ತೋಡಿಕೊಂಡಿದ್ದೀರಿ. ನಿಮ್ಮ ನಿಮ್ಮ ಎಲ್ಲ ಇಂದ್ರೀಯಗಳನ್ನು ಕ್ರಿಯಾಶೀಲವಾಗಿಟ್ಟು ಕೊಳ್ಳಿರಿ: ನೀವು ಏನನ್ನು ಹೇಳುತ್ತಿದ್ದೀರಿ? ನೀವು ಏನನ್ನು ನೋಡುತ್ತಿದ್ದೀರಿ? ನಿಮಗೇನು ಅನ್ನುಸುತ್ತಿದೆ ಅಥವಾ ಯಾವ ಕಂಪು ಬರುತ್ತಿದೆ? "ಸಿಹಿಯಾದ ಹಂಚಿಕೊಳ್ಳುವಿಕೆಯು ಆತನ ಮೂಗಿನ ಹೊರಳಿನಲ್ಲಿದೆ. ಆತನ ಕಣ್ಣುಗಳಲ್ಲಿ ಅದು ಸುರಿಯುತ್ತಿದ್ದು, ಉರಿಯುತ್ತಿದೆ ಮತ್ತು ಗಟ್ಟಿಯಾದ ರಕ್ತದೋಪಾದಿಯಲ್ಲಿ ನೆಲಕ್ಕೆ ಹನಿಹನಿಯಾಗಿ ಬೀಳುತ್ತಿದೆ."[7]

ನಂತರ ಉಳಿದ ಶಿಷ್ಯರ ಸ್ಥಾನದಲ್ಲಿ ಇದ್ದುಕೊಂಡು ಯೋಚಿಸಿರಿ, ನಿಮ್ಮನ್ನು ನೀವು ನಿದ್ರೆಗಾಗಿ ಹೋರಾಡುತ್ತಿರುವಂತೆ ಮತ್ತು ಆ ಯುದ್ಧದಲ್ಲಿ ಸೋತವರಂತೆ ಊಹಿಸಿಕೊಳ್ಳಿರಿ. ಕ್ರಿಸ್ತನು ಅವರಿರುವಲ್ಲಿ ಮರಳಿದಾಗ, ಅವರ ದೇಹಗಳು ಕೊಳ್ಳೆಹೊಡೆಯಲ್ಪಟ್ಟ ಮರಗಳ ಮೂಲದಂತೆ ಬಿದ್ದಿದ್ದವು. ಸರಳವಾದ ಉಸಿರಾಟದ ನಿಧಾನವಾದ ಉಸಿರು ತೆಗೆದುಕೊಳ್ಳುವಿಕೆಯ ಮೂಲಕ ಎಲ್ಲಾ ಮೂವರೂ ಅಲ್ಲಿ ಮಲಗಿದ್ದಾರೆಂದು ಯೇಸು ತಿಳಿಸಿದನು.[8]

ಯೆಹೋವನ ದೂತನು ಕಾಣಿಸಿಕೊಂಡ ಶಾಂತಿಯು ಮುಂಗಾಣುವುದಾಗಿತ್ತು. ಇದು ಸಂಭವಿಸಿದಾಗ ಆತನ ತಾಳಿಕೊಳ್ಳುವಿಕೆಯು ಹೇಗೆ ಬದಲಾಯಿತು? ಯೇಸು ಮೂರನೆಯ ಸಾರಿ ಶಿಷ್ಯರ ಹತ್ತಿರ ಮರಳಿದಾಗ, ತನ್ನ ಸುಂದರವಾದ ಕಲೆಯಾದ ಉಡುಗೆಯಲ್ಲಿ ಹೇಗೆ ಕಾಣಿಸಿದನು? ರಾತ್ರಿಯ ತಣ್ಣನೆಯ ಗಾಳಿಯಲ್ಲಿ ಆತನು ಕಂಪಿಸುತ್ತಿದ್ದನೇ? ಆತನ ಧ್ವನಿಯು ಹೇಗೆ ಆತ್ಮವಿಶ್ವಾಸವನ್ನು ವರ್ಣಿಸುವುದಾಗಿದೆ?


ಅಂತಿಮವಾಗಿ, ಜನರ ಗುಂಪು ತೋಟದಲ್ಲಿ ಮುತ್ತಿಕ್ಕುವುದನ್ನು ನೋಡಿರಿ "ಗುಂಪಿನ ರೀತಿಯ ಶಬ್ದವು ನಿಲ್ಲಿಸಲ್ಪಟ್ಟ ಗುಜುಗುಜು ಶಬ್ದವು ತೋಟದ ಮೂಲಕ ಬರುತ್ತಿದ್ದವು. ರಾತ್ರಿ ಯಲ್ಲಿ ದೀಪಗಳು, ಮುದುಡಿದ ತುಪ್ಪಳಗಳ ಕಪ್ಪು ಹೊಗೆ ಗುಂಪಿಗಿಂತ ಮೇಲೆ ಇದ್ದವು."[9] ಕರ್ತನು ಅವರನ್ನು ಧೈರ್ಯದಿಂದ ಭೇಟಿಯಾಗಲು ಹೋಗುವದನ್ನು ಚಿತ್ರಿಸಿಕೊಳ್ಳಿರಿ. ಆತನು ನನಗಾಗಿ ಮತ್ತು ನಿಮಗಾಗಿ ಸಾಯಲು ಸಿದ್ಧನಿದ್ದಾನೆ.

---

ಟಿಪ್ಪಣೆಗಳು

[1]A. M. Fairbairn, *Studies in the Life of Christ* (London: Hodder and Stroughton, 1889), 245. [2]H. I. Hester, *The Heart of the New Testament* (Liberty, Mo.: Quality Press, 1963), 199. [3]William Barclay, *The Gospel of John,* rev. ed., vol. 2, The Daily Study Bible Series (Philadelphia: Westminster Press, 1975), 221. [4]Jamie Buckingham, *The Nazarene* (Ann Arbor, Mich.: Servant Publications, 1991), 187. [5]S. D. Gordon, *Quiet Talks About Jesus* (New York: Fleming H. Revell Co., 1910), 231. [6]Ken Gire, *Moments with the Savior* (Grand Rapids, Mich.: Zondervan Publishing House, 1998), 325. [7]Walter Wangerin, Jr., *The Book of God: The Bible as a Novel* (Grand Rapids, Mich.: Zondervan Publishing House, 1996), 785. [8]Ibid., 786. [9]Gire, 331.

## ಸೂಚಿಸಲ್ಪಟ್ಟ ಕೊನೆಯ ತಾಸಿನಲ್ಲಿ ಯೇಸುವಿನ ಸಾಗಿದ ಮಾರ್ಗ



# ಪೊಂತೀಯ ಪಿಲಾತ
# (ಮತ್ತು ಯೇಸುವಿನ ಮರಣ)

ನೀವು ಎಂದಾದರೂ ಗ್ರಾಥಸ್ ಬಗ್ಗೆ ಕೇಳಿದ್ದೀರಾ? Marcellus ಎಂಬ ಹೆಸರು ನಿಮಗೆ ಚಿರಪರಿಚಿತವಿದೆಯಾ? "ಈ ಇಬ್ಬರು ಯಾರು ಎಂಬುದರ ಬಗ್ಗೆ ನನಗೆ ಯಾವ ಪರಿಚಯವೂ ಇಲ್ಲ" ಎಂದು ನೀವು ಹೇಳಬಹುದು. ಹಾಗಾದರೆ ಪಿಲಾತನ ಬಗೆಗೆ ಏನೆನ್ನುಸುತ್ತದೆ? ಕ್ವಚಿತವಾಗಿ, ನೀವು ಆತನ ಬಗ್ಗೆ ತಿಳಿದ್ದಿದೀರಿ. ಇದು ಆಸಕ್ತಿದಾಯಕವಾದದ್ದು, ಯಾಕೆಂದರೆ ಗ್ರಾಥಸ್ ಪಿಲಾತನಿಗಿಂತ ಮೊದಲು ಇದ್ದ ಯೂದಾಯದ ರೋಮನ ದೇಶಾಧಿಪತಿ ಆದರೆ ಮಾರಸೆಲ್ಲಸ ಪಿಲಾತನ ನಂತರದ ದೇಶಾಧಿಪತಿ ಮತ್ತು ಇಬ್ಬರೂ ಪಿಲಾತನಿಗಿಂತಲೂ ಉತ್ತಮ ದೇಶಾಧಿಪತಿಗಳು ಆಗಿದ್ದವರು. ನಾವು ಪಿಲಾತನನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಏಕೆ? ಯಾಕೆಂದರೆ ಒಂದು ಶುಕ್ರವಾರ *ಯೇಸು* ಪಿಲಾತನ ಮುಂದೆ ನಿಂತಿದ್ದನು.

ಪಿಲಾತನ ಬಗ್ಗೆ ನಾವು ತಿಳಿದಂತಹವುಗಳು ಸುವಾರ್ತೆಯ ವಿವರದಿಂದ ಬಂದಂತವು ಮತ್ತು ಆತನ ಆಡಳಿತಾವಧಿಯಲ್ಲಿ ಯೆಹೂದಿ ಇತಿಹಾಸಕಾರನಾದ ಜೋಸ್ಪಸನಿಂದ[1] ದಾಖಲಾದಂತವು ಆಗಿವೆ. ಹೇಗೋ, ಇತರ ದೇವವಾಕ್ಯದ, ಐತಿಹಾಸದ, ಮತ್ತು ಪ್ರಾಚ್ಯವಸ್ತು ಶಾಸ್ತ್ರಜ್ಞರಿಂದ ಸಹ ಆತನ ಬಗ್ಗೆ ಆಧಾರಗಳು ಇರುವವು ಆಗಿವೆ. ಈ ಉಪಲೇಖನದ ಅಧ್ಯಯನವು ಈ ಆಧಾರಗಳಿಂದ ತೆಗೆದುಕೊಳ್ಳಲ್ಪಟ್ಟವು ಆಗಿವೆ, ಮತ್ತು ಇತರವು ನಮ್ಮ ಕರ್ತನ ಮರಣದ ಬಗ್ಗೆ ಸೂಚಿಸುವವು ಆಗಿವೆ.

### ಹೊಸ ಒಡಂಬಡಿಕೆಯ ಆಧಾರಗಳು

ಯೇಸುವಿನ ರೋಮನ್ನರ ವಿಚಾರಣೆಯ ಜೊತೆಯ ಸಂಬಂಧದಲ್ಲಿ ಪಿಲಾತನ ಬಗೆಗೆ ಇರುವ ಇತರ ಆಧಾರಗಳು (ಮತ್ತಾಯ 27; ಮಾರ್ಕ 15; ಲೂಕ 23; ಯೋಹಾನ 18; 19). ಇದು ಹೊಸ ಒಡಂಬಡಿಕೆಯು ರೋಮನ್ನರ ದೇಶಾಧಿಪತಿಯ ಬಗ್ಗೆ ಕೇವಲ ಬೆರಳೆಣಿಕೆಯಷ್ಟು ಪರಿಚ್ಛೇದಗಳನ್ನು ಹೊಂದಿದೆ (ಲೂಕ 3:1). ಗಲಿಲಾಯದವರ "ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ ಬೆರೆಸಿದನು" ಎಂದು ನೀಡಲಾದ ವರದಿಯಲ್ಲಿ ಆತನಿಗೆ ಕೊಡಲಾಗಿತ್ತು (ಲೂಕ 13:1). ಬಹುಶಃ ದಂಗೆ ಎದ್ದವರನ್ನು ಅಡಗಿಸಲಿಕ್ಕೆ ಇರಬಹುದು (ಈ ಅಧ್ಯಯನದಲ್ಲಿ ನಂತರ ಚರ್ಚಿಸಲಾಗಿದೆ). ಅಪೊಸ್ತಲರ ಪ್ರಸಂಗಗಳಲ್ಲಿ, ಪಿಲಾತನು ಯೇಸುವಿನ ಮರಣದಲ್ಲಿ ಪಾಲ್ಗೊಂಡಿದ್ದನು ಎಂದು ಸೂಚಿಸಲಾಗಿದೆ (ಅಪೊಸ್ತಲರ ಕೃತ್ಯಗಳು 4:27; 13:28; ನೋಡಿರಿ 3:13). "ಪೊಂತ್ಯ ಪಿಲಾತನ ಕಾಲದಲ್ಲಿ ಶ್ರೇಷ್ಟ ಪ್ರತಿಜ್ಞೆಯನ್ನು ತಾನೇ ಸಾಕ್ಷಿಯಾಗಿದ್ದು ..." ಎಂದು ಪೌಲನು ಮಾತನಾಡುತ್ತಾನೆ (1 ತಿಮೋಥೆ 6:13).

J. G. Vos ರವರು ಹೊಸ ಒಡಂಬಡಿಕೆಯು ದಾಖಲಿಸಿದ ಸಾರಾಂಶವನ್ನು ಕೊಡುವವರಾಗಿದ್ದಾರೆ: ಇದು "ಪಿಲಾತನು ನಿರಾಶಾವಾದಿಯೂ ಮತ್ತು ಧರ್ಮವಿರೋಧಿಯೂ ಆಗಿದ್ದು - ಒಬ್ಬ ಕಟುವಾದ ರೋಮನ್ನನೂ ಆಗಿದ್ದನು ಎಂದು ವರ್ಣಿಸುತ್ತದೆ, ಆದರೆ ರೋಮನ್ ಸಂಪ್ರದಾಯದ ಪಾವಿತ್ರ್ಯದ ನ್ಯಾಯದ, ಮತ್ತು ಪ್ರಾಮಾಣಿಕತೆಯ ಕೊರತೆಯು ಇತ್ತು. ಪಿಲಾತನು ನ್ಯಾಯ ಪರಿಪಾಲಕನಿಗಿಂತಲೂ ಹೆಚ್ಚಾಗಿ ರಾಜಿಯ ಮತ್ತು ಪ್ರಾಯೋಜಕತೆಯ ನಿರ್ವಹಣಕಾರನಂತೆ ಇದ್ದನು."[2]

## ಫ್ಲಾವಿಯಸ್ ಜೋಸ್ಟಸ್ (ಕ್ರಿ.ಶ. 37 - ನಂತರ ಕ್ರಿ.ಶ. 93)

ಪಿಲಾತನ ದೇಶಾಧಿಪತ್ಯವು ಆರಂಭದಲ್ಲಿ ಯೆಹೂದಗಳೊಡನೆಯ ಅಸ್ಥಿರ ಸಂಬಂಧದ ಮೇಲೆ ಬೆಳಕನ್ನು ಚೆಲ್ಲುವ ಮೂರು ಘಟನೆಗಳನ್ನು ಜೋಸ್ಪಸ್ ಬರೆಯುತ್ತಾನೆ. (1) ಪಿಲಾತನು ಯೆರೂಸಲೇಮಿಗೆ ಸೈನ್ಯದ ತುಕಡಿಯನ್ನು ಕಳುಹಿಸಿದಾಗ, ಆ ಸೈನ್ಯವು ಚಕ್ರವರ್ತಿಯ ಚಿತ್ರಗಳನ್ನು ಪ್ರದರ್ಶಿಸಿತು, ಯೆಹೂದಿ ಧರ್ಮಶಾಸ್ತ್ರಕ್ಕೆ ಮತ್ತು ಯೂದಾಯದ ಹಿಂದಿನ ರೋಮನ್ ರೂಢಿಗಳ ತದ್ವಿರುದ್ಧವಾಗಿ ಬಳಸಿತು ಯೆಹೂದಿಗಳೊಂದಿಗೆ ಆದ ಸಂಘರ್ಷದ ನಂತರ ಪಿಲಾತನು ಆ ಚಿಹ್ನೆಗಳನ್ನು ತೆಗೆದುಬಿಟ್ಟನು.[3] (2) ಯೆರೂಸಲೇಮಿಗೆ ನೀರನ್ನು ತರಲು ಕಾಲುವೆಯೊಂದನ್ನು ನಿರ್ಮಿಸುವ ಮೂಲಕ ಪಿಲಾತನು ಯೆಹೂದಿಗಳ ವೈರತ್ವವನ್ನು ಶಾಂತಗೊಳಿಸಲು ಪ್ರಯತ್ನಿಸಿದನು. ಹೇಗೋ, ಆ ಯೋಜನೆಗೆ ದೇವಾಲಯದ ಹಣವು ಬಳಕೆಯಾಗಿದೆ ಎಂದು ಕಂಡು ಬಂದಾಗ ಅಲ್ಲಿ ಬಂಡಾಯವು ಪ್ರಾಯೋಜಿಸಲ್ಪಟ್ಟಿತು ಮತ್ತು ದೊಂಬಿಯಲ್ಲಿ ಅನೇಕರು ಕೊಲ್ಲಲ್ಪಟ್ಟರು.[4] (ಈ ಘಟನೆಯು ಲೂಕ 13:1ಕ್ಕೆ ಒಂದು ವಸ್ತುವನ್ನು ಒದಗಿಸಿದೆ ಎಂದು ಕೆಲವರು ಯೋಚಿಸುವವರಾಗಿರೆ.) (3) ಆತನ ಕಛೇರಿಯ ಹತ್ತನೆಯ ಮತ್ತು ಅಂತಿಮ ವರ್ಷದಲ್ಲಿ ಪಿಲಾತನು ಸಮಾರ್ಯದ ಸೈನ್ಯವನ್ನು ಮಟ್ಟಹಾಕಲು ಸೈನ್ಯವನ್ನು ಬಳಸಿದ್ದನು. ಆ ಗುಂಪು ದಂಗೆಯಲ್ಲಿತ್ತು ಎಂಬುದಕ್ಕೆ ಯಾವುದೇ ಪುರಾವೆಗಳು ಇಲ್ಲದಿದ್ದರೂ ಕೂಡಾ ಇದು ಅಡಗಿಸಿಟ್ಟ ಸೈನ್ಯವಾಗಿತ್ತು. ಈ ಗಲಬೆಯಲ್ಲಿ ಅನೇಕರು ಮರಣಿಸಿದರು ಮತ್ತು ಯುದ್ಧವು ನಡೆಯುತ್ತಿದ್ದಾಗ ಅನೇಕ ದಂಗೆಕೋರರು ಉಳಿದುಕೊಂಡರು. ಸಮಾರ್ಯದ ಅಧಿಕಾರಿಗಳು ಪಿಲಾತನಿಗಿಂತ ಹಿರಿಯನಾದ ಸಿರಿಯದ ಅಧಿಪತಿಗೆ ತಮ್ಮ ಪ್ರತಿಭಟನೆ ತಿಳಿಸಿದರು. ಆತನು ಪಿಲಾತನನ್ನು ಆತನ ಸ್ಥಾನದಿಂದ ತೆಗೆದು ಹಾಕಿದನು ಮತ್ತು ವಿಚಾರಣೆಯನ್ನು ಎದುರಿಸಲು ಅವನನ್ನು ರೋಮಕ್ಕೆ ಕರೆಯಿಸಿಕೊಂಡನು.[5]

ನಮ್ಮ ಪ್ರಸ್ತುತ ಅಧ್ಯಯನಕ್ಕಾಗಿ ಪ್ರಮುಖ ಆಸಕ್ತಿಯು ಎಂದು *Testimonium Flavianum* (ಯೇಸುವಿನ ಬಗೆಗೆ ಆತನ "ಸಾಕ್ಷಿ") ಎಂದು ಕರೆಯಲ್ಪಡುವ ಜೋಸ್ಪಸ್ ಆಗಿರಬಹುದು. ಐತಿಹಾಸಿಕ ಪದಗಳು ಕ್ರೈಸ್ತರಿಂದ ವರ್ಣಿಸಲ್ಪಟ್ಟವು, ಆದರೆ "... ಮೊದಲು ಆತನನ್ನು ಪ್ರೀತಿಸಿ ಮತ್ತು ನಂತರ ಆತನನ್ನು ಮರೆತ ಆತನನ್ನು ಶಿಲುಬೆಗೆ ಹಾಕಿಸಿದ್ದು ಪಿಲಾತನಂಥ ನಮ್ಮಲ್ಲಿರುವ ಪ್ರಮುಖ ವ್ಯಕ್ತಿಗಳು ಸೂಚಿಸಿದ್ದು" ಎಂಬ ಹೇಳಿಕೆಯನ್ನು ಒಳಗೊಂಡ ಹೇಳಿಕೆಯ ಕೇಂದ್ರವು ಜೋಸ್ಪಸ್‌ನಿಂದ ಬರೆಯಲ್ಪಟ್ಟದ್ದು ಎಂದು ಅನೇಕರು ಯೋಚಿಸುವವರಾಗಿದ್ದಾರೆ.[6]

## ಫಿಲೋ (ಹೋಲಿಸಿ. ಕ್ರಿ.ಪೂ. 20–ಹೋಲಿಸಿ. ಕ್ರಿ.ಶ. 50)

ಅಲೆಕ್ಸಾಂಡ್ರೀಯದ ಯೆಹೂದಿ ತತ್ವಜ್ಞಾನಿ ಫಿಲೋ ಪಿಲಾತನ ಅವಗುಣಗಳನ್ನು ದೂಷಿಸುವವನಾಗಿದ್ದಾನೆ. ಆ ತತ್ವಜ್ಞಾನಿಯು ವಿಸ್ತೃತವಾಗಿ ಹೇಳುವ ತಪ್ಪಿನಲ್ಲಿದ್ದಾನೆ ಎಂದು ಅನೇಕ ಪಂಡಿತರು ನಂಬುವವರಾಗಿದ್ದಾರೆ. ಆದರೆ ಸತ್ಯವೇದಿಯಾಗಿ ಇರುವ ದೇಶಾಧಿಪತಿಯ ಚಿತ್ರ ಮತ್ತು ಐತಿಹಾಸಿಕ ದಾಖಲೆಗಳ ಪ್ರಕಾರ ಅನೇಕರು ಆತನ ಮಾತನ್ನು ಗೌರವಿಸುವವರಾಗಿದ್ದಾರೆ. ಫಿಲೋ ಪಿಲಾತನ "ಭ್ರಷ್ಟಚಾರ, ಆತನ ದರ್ಪದ ಕಾರ್ಯಗಳು, ಆತನು ಸುಲಿಗೆ [ಒತ್ತಾಯ ಪೂರ್ವಕವಾಗಿ ಆಸ್ತಿಯನ್ನು ಮುಟ್ಟುಗೋಲು ಹಾಕುವದೂ] ಜನರನ್ನು ಅವಮಾನ ಮಾಡುವ ಆತನ ಅಭ್ಯಾಸ, ಆತನ ಕ್ರೂರತೆ ಮತ್ತು ಬಿಡುವಿಲ್ಲದ ಜನರ ಕೊಲೆ ಮತ್ತು ದೂಷಣೆ, ಮತ್ತು ಕೊನೆಯಾಗದ ಅನಾಯಾಸವಾಗಿ ಬಂದಥ ಶೋಚನೀಯ ಅಮಾನವೀಯತೆಯ"[7] ಬಗ್ಗೆ ಬರೆದಿದ್ದಾನೆ.

ಯೆಹೂದಿಗಳೊಡನೆಯ ಅತಂತ್ರದ ಸಂಬಂಧಕ್ಕೆ ಸಂಬಂಧಿಸಿದಂತ ಒಂದು ಘಟನೆಯಯ ಫಿಲೋ ದಾಖಲಿಸಿದ್ದಾನೆ. ದೇಶಾಧಿಪತಿಯು ಯೆರೂಸಲೇಮಿನಲ್ಲಿನ ತನ್ನ ಮನೆಯಲ್ಲಿ ಚಕ್ರವರ್ತಿಗೆ ಮೀಸಾಲಗಿಟ್ಟ ಚಿತ್ರವುಳ್ಳ ಕೆತ್ತನೆಯನ್ನು ಇಟ್ಟನು. ಇದರಿಂದ ಕೋಪಗೊಂಡ ಯೆಹೂದಿ ನಾಯಕರು ತಿಬೇರಿಯನಿಗೆ ಅಕ್ಷೇಪಣೆಯನ್ನು ಕಳುಹಿಸಿದರು.

ತಿಬೇರಿಯನು ಆಜ್ಞಾಪಿಸಿದಾಗ ಕೈಸರದ ಅಗಾಸ್ತಸ್ ದೇವಾಲಯದಲ್ಲಿನ ಕೆತ್ತನೆಗಳು ತೆಗೆಯಲ್ಪಟ್ಟವು.[8]

## ಇನ್ನಿತರ ಐತಿಹಾಸಿಕ ದಾಖಲೆಗಳು

ಯೇಸು "ಪಸ್ಕ ಹಬ್ಬದಂದು ಶಿಲುಬೆಗೆ ಏರಿಸಲ್ಪಟ್ಟನು"[9] ಎಂದು ಯೆಹೂದಿ ಬೆಬಿಲೋನಿಯದ ತಾಲಮಡ್ ಆಧರಿಸುತ್ತದೆ ಮತ್ತು (ಮೊದಲೇ ನಿರೀಕ್ಷಿಸಿದಂತೆ) ಯೆಹೂದಿ ನಾಯಕರು ಆತನನ್ನು ಕೊಲ್ಲುವ ನಿರ್ಧಾರ ಮಾಡಿದರು ಎಂದು ಸೂಚಿಸುವದೂ ಆಗಿದೆ.

ಕ್ರಿ.ಶ. 115 ಮತ್ತು 117 ಮಧ್ಯ ಬರೆದಂತಹ ಲ್ಯಾಟೀನ್ ಇತಿಹಾಸಕಾರ ಟೆಸಿಟಸ್ ಕ್ರೈಸ್ತರ ಬಗ್ಗೆ ಈ ಪ್ರಸ್ತಾಪವನ್ನು ಮಾಡುತ್ತಾನೆ. "ಅವರು ತಿಬೇರಿಯನ್ನನ ಆಳ್ವಿಕೆಯಲ್ಲಿನ ಹಿಂಸ್ರಕನಾದ ಪೊಂತೀಯ ಪಿಲಾತನಿಂದ ಮರಣದಂಡನೆಯನ್ನು ಪಡೆದ ಕ್ರಿಸ್ತನಿಂದ ಹೆಸರನ್ನು ಪಡೆದರು."[10]

Mara bar Serapion ತನ್ನ ಮಗನಿಗೆ ಯೇಸುವನ್ನು ಈ ಮಾತುಗಳಿಂದ ಸೂಚಿಸುತ್ತಾ ಬರೆದ ಸಿರಿಯ ಪತ್ರದಂತೆ, "ತನ್ನ ಜಾಣನಾದ ಅರಸನಿಗೆ ಮರಣಶಿಕ್ಷೆಯನ್ನು ಕೊಡಿಸುವುದರಿಂದ ಯೆಹೂದಿಗಳು ಯಾವ ಲಾಭವನ್ನು ಪಡೆದರು? ಇದು ಕೇವಲ ಅವರ ರಾಜ್ಯವು ನಾಶಮಾಡಲ್ಪಟ್ಟ ನಂತರವೇ ... ಅಥವಾ ಆ ಜಾಣ ಅರಸನು ಒಮ್ಮಲೇ ಮರಣಿಸಿದಾಗಲೇ; ಆತನು ತಾನು ಕೊಟ್ಟ ಬೋಧನೆಯ ಮೇಲೆ ಆತನು ಜೀವಿಸಿದ್ದನು" ಎಂದು ಹೇಳಿದ್ದಾಳೆ.[11] ಈ ಮೂಲಕ ದಿನಾಂಕವು ಅನಿಶ್ಚಿತವಾದದ್ದಾಗಿದೆ, ಆದರೆ ಇದು ಕ್ರಿ.ಶ. 73 ಕ್ಕಿಂತ ಮೊದಲೆ ಬರೆದದ್ದಾಗಿರಬೇಕು.

1961ರಲ್ಲಿ ಪಿಲಾತನ ಮೊದಲ ಪಾಚ್ಯವಸ್ತು ಶಾಸ್ತ್ರದ ಆಧಾರವು ಕಂಡುಹಿಡಿಯಲ್ಪಟ್ಟಿತು. "ಪೊಂತಿಯ ಪಿಲಾತನು, ಯೂದಯಕ್ಕೆ ಯೋಗ್ಯನು" ಎಂಬ ಬರಹವುಳ್ಳ ಕಲ್ಲನ್ನು ಪಾಚ್ಯವಸ್ತು ಶಾಸ್ತ್ರಜ್ಞರು ಕೈಸರದ ರೋಮನ್ ಥೇಟರಿನಲ್ಲಿ ಕಂಡುಕೊಂಡರು.[12]

## ಇತರ ಕ್ರಿಸ್ತೀಯ ಲೇಖಕರು

ಅನೇಕ ಇತರ ಕ್ರಿಸ್ತೀಯ ಲೇಖಕರು ಪಿಲಾತನನ್ನು ಆತನ ಮೂಲವನ್ನು ಒಳಗೊಂಡದ್ದನ್ನು ಸೂಚಿಸಿದ್ದಾರೆ. ಜಸ್ಟಿನ್ ಮಾರ್ಟಿರ್ ಮತ್ತು ತರ್ತುಲ್ಯನು ಯೇಸುವಿನ[13] ವಿಚಾರಣೆಯ ವೇಳೆಯಲ್ಲಿನ ರೋಮ ಅಧಿಕೃತ ಕಚೇರಿಯನ್ನು ಸೂಚಿಸಿದ್ದಾರೆ, ಆದರೆ ಹಾಗೆ ನೋಡಿದ್ದೇ ಆದರೆ ಅವರು ಈ ದಾಖಲೆಯನ್ನು ನಿಜವಾಗಿ ನೋಡಿದ್ದಾರೆ ಎನ್ನುವದೇ ಅಸ್ಪಷ್ಟವಾಗಿದೆ.[14]

ನಮ್ಮಲ್ಲಿ ಅನೇಕರಿಗೆ, ಪಿಲಾತನ ಅಂತಿಮ ದಿನದ ಬಗ್ಗೆ ವೈಯಕ್ತಿಕ ಆಸಕ್ತಿಯು ಇರುವುದಾಗಿದೆ. ದೇಶಾಧಿಪತಿಯನ್ನು ರೋಮಕ್ಕೆ ಮರಳಿ ಕರೆಯಿಸಿಕೊಂಡ ಮೇಲೆ (ಈ ಅಧ್ಯಾಯದಲ್ಲಿನ ಈ ಮುಂಚಿನ "Flavius Josephus" ಅಡಿಯಲ್ಲಿ ಸೂಚಿಸಲ್ಪಟ್ಟಂತೆ) ಆತನು ಟೆಸಿಟಸ್ ಮರಣದ ನಂತರ ಅಲ್ಲಿ ತಲುಪಿದನು. ನಂತರ ಏನಾಯಿತು ಎಂಬುದಕ್ಕೆ ಯಾವುದೇ ಐತಿಹಾಸಿಕ ದಾಖಲೆಗಳು ನಮಗೆ ಇಲ್ಲ, ಆದರೆ ಆತನು ತನ್ನ ವಿಚಾರಣೆಯ ನಂತರ ಆತ್ಮಹತ್ಯವನ್ನು ಮಾಡಿಕೊಂಡನು ಎಂದು Eusebiusನ ದಾಖಲೆಯು ಹೇಳುತ್ತದೆ.[15] ಒಂದು ಸಂಪ್ರದಾಯದ ಪ್ರಕಾರ ತನ್ನನ್ನು ಗಡಿಪಾರು ಮಾಡಿದ ಸ್ಥಳದಲ್ಲಿ ಅಂದರೆ ಗೌಲದಲ್ಲಿರುವ Vienna Allobrogum (ಈಗ ಫ್ರಾನ್ಸ್‌ನಲ್ಲಿರುವ) ಗಾಯನ (ಕ್ರಿ.ಶ. 37-41) ಆಳ್ವಿಕೆಯಲ್ಲಿ ಆತನು ಆತ್ಮಹತ್ಯೆ ಮಾಡಿಕೊಂಡನು ಎಂದಿದೆ.[16]

**ಟಿಪ್ಪಣಿಗಳು**

[1]Josephus *Antiquities of the Jews* 18.2.2ä 18.3.1–2ä *Wars of the Jews* 2.9.2–4. [2]J. G. Vos, “Pilate, Pontius,” *The Zondervan Pictorial Encyclopedia of the Bible,* gen. ed. Merrill C. Tenney (Grand Rapids, Mich.: Zondervan Publishing House, 1975), 4:792. [3]*Antiquities of the Jews* 18:3.1ä *Wars of the Jews* 2.9.2, 3. [4]*Wars of the Jews* 2.9.4. [5]*Antiquities of the Jews* 18.4.1, 2. [6]*Antiquities of the Jews* 18.3.3. [7]Philo *Legatio ad Galium* 38. [8]Philo *De legatione ad Galium* 299–305. [9]*Mishnah*, Sanhedrin 43a, quoted in Bruce Corley, “Trial of Jesus,” *Dictionary of Jesus and the Gospels*, eds. Joel B. Green and Scot McKnight (Downers Grove, Ill.: InterVarsity Press, 1992), 842. [10]Tacitus *Annals* 15.44.

[11]Quoted in Corley, 842. [12]John McRay, *Archaeology and the New Testament* (Grand Rapids, Mich.: Baker Book House, 1991), 203–4. [13]Justin Martyr *Apology* 1.35ä 1.48ä Tertullian *Apology* 5.2ä 21.24. [14]ಶತಮಾನಗಳ ನಂತರ, “ಪಿಲಾತನ ಕಾರ್ಯಗಳು” ಎಂಬ ದೈವ ಪ್ರೇರೆಪಿತವಲ್ಲದ ಒಂದ ವಿನೋದವಾದ ಪತ್ರವು ಒಬ್ಬ ಹೆಸರು ಅರಿಯದವರಿಂದ ಬರೆಯಲ್ಪಟ್ಟಿತು. [15]Eusebius *Ecclesiastical History* 2.7. [16]Ibid.